
6



# 1

## ನಾವೆಲ್ಲರೂ ಒಂದೇ ...

## ರಸ್ತೆ ದುರಂತದಲ್ಲಿ ಸಾವು: ಸಾರ್ಥಕವಾದ ಕಣ್ಣುಗಳು

ಮಂಗಳೂರು, ಸೆ. 13 : ಶುಕ್ರವಾರ ಇಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಅಡಿಕೆ ವ್ಯಾಪಾರಿ ತೇಜಸ್ ಮೆಹ್ತಾ (35 ವ.) ಅವರು ತಮ್ಮ ಕಣ್ಣುಗಳನ್ನು ದಾನ ಮಾಡಿದ್ದಾರೆ.

ತಮ್ಮ ನೇತ್ರಗಳನ್ನು ದಾನ ಮಾಡುವ ಬಗ್ಗೆ ಅವರು ಮುಂಚಿತವಾಗಿಯೇ ತಿಳಿಸಿದ್ದರು ಎಂದು ಅವರ ಭಾವ ಬಿಮಲ್ ಕೊಚಾನಿ ತಿಳಿಸಿದ್ದಾರೆ.

ತೇಜಸ್ ಮೆಹ್ತಾ ಅವರು ಶುಕ್ರವಾರ ಅಪರಾಹ್ನ 3 ಗಂಟೆ ವೇಳೆಗೆ ಮೋಟಾರ್ ಸೈಕಲ್‌ನಲ್ಲಿ ತನ್ನ ಪುತ್ರ ಧ್ರುವನನ್ನು ಬಿಜೈನ ಲೂರ್ಡ್ಸ್ ಸೆಂಟ್ರಲ್ ಸ್ಕೂಲ್‌ನಿಂದ ಮನೆಗೆ ಕರೆದುಕೊಂಡು ಹೋಗುತ್ತಿದ್ದಾಗ ಸರ್ಕೀಟ್‌ಹೌಸ್ ಜಂಕ್ಷನ್ ಬಳಿ ಮಿನಿ ಲಾರಿ ಡಿಕ್ಕಿಹೊಡೆದು ತೀವ್ರವಾಗಿ ಗಾಯಗೊಂಡು ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಅಷ್ಟರಲ್ಲಿ ಅವರು ಮೃತಪಟ್ಟಿದ್ದರು. ಆಸ್ಪತ್ರೆಯಲ್ಲಿ ಅವರ ಕಣ್ಣುಗಳನ್ನು ದಾನ ಮಾಡಲಾಯಿತು.

ತೇಜಸ್ ಅವರು ತಮ್ಮ ಕಿಡ್ನಿಯನ್ನೂ ದಾನ ಮಾಡುವವರಿದ್ದರು. ಆದರೆ ಅಪಘಾತದಲ್ಲಿ ಮೃತ ಪಟ್ಟ ಕಾರಣ ಈ ಅಮೂಲ್ಯ ದಾನಕಾರ್ಯ ಸಾಧ್ಯವಾಗಲಿಲ್ಲ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಪಘಾತದಲ್ಲಿ ಕುಟುಂಬದ ಯಜಮಾನ ಮೃತಪಟ್ಟು ಅನಿರೀಕ್ಷಿತವಾಗಿ ಬಂದೆರಗಿದ ಈ ಆಘಾತದಿಂದ ಕುಟುಂಬದ ಸದಸ್ಯರೆಲ್ಲ ತೀವ್ರ ದುಃಖ ಮತ್ತು ಆತಂಕದಲ್ಲಿದ್ದ ಸಂದರ್ಭದಲ್ಲಿಯೂ ಈ ನೇತ್ರದಾನವನ್ನು ನೆರವೇರಿಸುವ ಮೂಲಕ ಅವರು ಮಾನವೀಯ ಸ್ಪಂದನವನ್ನು ಮೆರೆದಿದ್ದಾರೆ.

- ❒ ತೇಜಸ್ ಮೆಹ್ತಾರ ಬದುಕು ಹೇಗೆ ಸಾರ್ಥಕವಾಯಿತು?
- ❒ ನಿಮ್ಮ ಪರಿಸರದ ಯಾರಾದರೂ ಮಹನೀಯರು ಮಾನವೀಯತೆಯನ್ನು ಮೆರೆದ ಸಂದರ್ಭಗಳನ್ನು ಬರೆದು ಮಂಡಿಸಿರಿ.

## ಕಣ್ಣು ತೆರೆಯಿತು

ಕಾಸಿಮ್ ಮತ್ತು ಬಾಲಾಜಿ ನೆರೆಹೊರೆಯವರು. ಕಾಸಿಮನ ಪತ್ನಿ ಖದೀಜ ಮತ್ತು ಬಾಲಾಜಿಯ ಪತ್ನಿ ರೋಹಿಣಿಯಮ್ಮ ಪರಸ್ಪರ ಅನ್ಯೋನ್ಯವಾಗಿದ್ದರು. ರಾತ್ರೆಯ ಗಂಜಿ, ರುಚಿಸುವ ಪದಾರ್ಥ, ಒಂದಿಷ್ಟು ಬಿಸಿನೀರು, ಇಷ್ಟಾದರೆ ಖದೀಜಳ ಮನೆಗೆಲಸ ಮುಗಿದು ಆಗ ತಾನೆ ಬರುವ ರೋಹಿಣಿಯಮ್ಮನವರೊಡನೆ ಎಷ್ಟೂ ಮಾತುಕತೆ ಮಾಡಬಹುದಿತ್ತು. ಸಂಜೆ ವಾಕಿಂಗಿಗೆ ಹೋಗಿ ತಂಬೆಲರಿಗೆ ಮೈಯೊಡ್ಡಿ ಪ್ರಕೃತಿಯ ನೈಜ ಸೌಂದರ್ಯವನ್ನು ವರ್ಣಿಸಿ ಕತ್ತಲಾಗುವಾಗ ಹಿಂದಿರುಗುವ ಬಯಕೆ ಅವರಿಗಿಲ್ಲ. 'ರೋಹಿಣಿಯಮ್ಮ ಬಂದಿರೇ?' ಎಂದು ಮಿದುವಾಗಿ ನುಡಿದು, ಹುಲ್ಲಿನ ಚಾಪೆಯನ್ನು ಮನೆಮಂಟಪದಲ್ಲಿ ಹಾಸಿ ಖದೀಜಾ ಮುಗುಳುನಗುತ್ತಿದ್ದಳು. ಅನಂತರ ಅಡುಗೆ ಕೋಣೆಗೋಡಿ ಒಂದಿಷ್ಟು ಕಾಫಿ ಲೋಟೆಯಲ್ಲಿ ತಂದಿರಿಸಿದಾಗ 'ಏಕಮ್ಮಾ, ದಿನಾಲೂ ನಿನ್ನದೇ ಕಾಫಿ

ಕುಡಿಯಬೇಕೆಂದೇ ವಿಧಿಯಿದೆಯೇ? ನಮ್ಮಲ್ಲಿ ಒಮ್ಮೆಯಾದರೂ ಕಾಫಿ ಕುಡಿದು ಪಾಪದ ರೋಹಿಣಿಯಕ್ಕನಿಗೆ ನಷ್ಟ ಮಾಡಬಾರದೆಂಬ ಮುಂಜಾಗ್ರತೆಯೇ?' ಎಂದು ಸವಾಲು ಮಾಡುವರು. ಅನಂತರ ಒಂದೇ ಚಾಪೆಯಲ್ಲಿ ಮೈ ಮೈ ಸೋಂಕಿ ಕುಳಿತರೆಂದರೆ ಯಾವ ಶಕ್ತಿಯೂ ಅವರ ಮಾತುಕತೆಯನ್ನು ಮುರಿಯಲಾರದು. ಜೀವನದ ಹತ್ತಾರು ಸಮಸ್ಯೆಗಳನ್ನು ರೋಹಿಣಿ ಮತ್ತು ಖದೀಜಾ ಚರ್ಚಿಸುವರು. ಎಷ್ಟು ಪವಿತ್ರ ಪ್ರೇಮವದು! ಅಡುಗೆಯ ಸಾಂಬಾರಗಳೇನಾದರೂ ಮುಗಿದಿದ್ದರೆ ರೋಹಿಣಿಯಮ್ಮ ಖದೀಜಳಿಂದಲೂ, ಖದೀಜಾಗೇನಾದರೂ ಬೇಕಿದ್ದರೆ ರೋಹಿಣಿಯಮ್ಮನವರಿಂದಲೂ ನೆರವು ಬೇಕಾಗುತ್ತಿತ್ತು.

ಸಲುಗೆಯ ಈ ಜೀವನ ಬಹುದಿನ ಬಾಳಲಿಲ್ಲ. ದಿನ ಹೋದಂತೆ ಎರಡು ಮನೆಯವರೊಳಗೂ ಒಂದು ತೆರನಾದ ಅವಿಶ್ವಾಸ, ವೈಷಮ್ಯಗಳೆದ್ದುವು. ದಿನಾಲೂ ಖದೀಜಾಳ ಮನೆ ಸಂದರ್ಶಿಸುತ್ತಿದ್ದ ರೋಹಿಣಿಗೆ ಅದನ್ನು ನಿಲ್ಲಿಸಲಿಕ್ಕಾಗಿ ಕಟ್ಟಾಜ್ಞೆಯಾಗಿತ್ತು! ಕಾರಣವಿಷ್ಟೆ. ಎರಡು ದಿನಗಳ ಹಿಂದೆ ಕಾಸಿಮನ ಅತಿಥಿಯಾಗಿ ಬಂದವನು ಕಾಸಿಮನ ತೀರಿ ಹೋದ ದೊಡ್ಡಪ್ಪನ ಮಗನಂತೆ. ಮುಂಬಯಿಯಲ್ಲಿ ಹಡಗಿನ ನೌಕರನಾಗಿದ್ದಾತ ಕೋಮುವಾರು ಹೊಡೆದಾಟದ ಕುರುಕ್ಷೇತ್ರದಿಂದ ಪಾರಾಗಲಿಕ್ಕಾಗಿ ಊರಿಗೆ ಬಂದವನು ಕಾಸಿಮನನ್ನು ನೋಡಲಿಕ್ಕಾಗಿ ಬಂದುದಂತೆ. ಹಳ್ಳಿಯವರಿಗೆ ನಗರದ ಸಮಾಚಾರ ಕೇಳುವುದೆಂದರೆ ಬಹು ಇಷ್ಟ. ಹಳ್ಳಿಯಿಂದ ಪೇಟೆಗೆ ಹೋಗಿ ಬಹಳ ದಿನಗಳ ಅನಂತರ ಹಿಂತಿರುಗುವವರಿಗೆ ಅದನ್ನು ಹೇಳುವುದೆಂದರೆ ಅಷ್ಟೇ ಮಮತೆ. ಕಾಸಿಮನ ಅತಿಥಿ ಊಟ ಮುಗಿಸಿ ಹೇಳತೊಡಗಿದ. ಕಾಸಿಂ ದಂಪತಿಗಳು ನಿಶ್ಚಿಂತರಾಗಿ ಕೇಳಿದರು.

ಕಾಸಿಮನ ಅತಿಥಿಯ ಬಾಯಿಂದ ಹೊರಟ ಕತೆಯು ಹಳ್ಳಿಯ ಆ ಎರಡು ನೆರೆಮನೆಗಳಲ್ಲಿ, ರೋಹಿಣಿ–ಖದೀಜಾರ ಗೆಳೆತನದ ಆ ಪವಿತ್ರ ಬಾಳಲ್ಲಿ ವಿಷದ ಬೀಜವನ್ನು ಬಿತ್ತಿತು. ಬಾಲಾಜಿಯವರು ಪತ್ನಿಯನ್ನು ಅವಸರದಿಂದ ಕರೆದು "ಇನ್ನು ಆ ಮನೆಗೆ ಹೋಗದಿರು; ಅವರು ನಮ್ಮನ್ನು ಕೊಲ್ಲುವ ಪಣತೊಟ್ಟಿದ್ದಾರೆ" ಎಂದು ಪಿಸುಗುಟ್ಟಿದರು.

ರೋಹಿಣಿಯಮ್ಮ ಖದೀಜಾನ ಮನೆಗೆ ಕಾಲಿರಿಸದೆ ಒಂದು ಮಾಸ ಮೀರಿತ್ತು. ಆ ಎರಡು ಮನೆಯವರಿಗೆ ಪರಸ್ಪರ ಮಾತಿಲ್ಲದೇ ಅಷ್ಟೇ ಅವಧಿಯಾಗಿತ್ತು. ಇನ್ನು ಇಲ್ಲುಳಿದರೆ ಕೆಲವೇ ದಿನಗಳಲ್ಲಿ ತನ್ನನ್ನು ಕೊಲ್ಲುವರೆಂದು ಶಂಕೆಪಟ್ಟ ಬಾಲಾಜಿಯವರು ಮನೆ ಬದಲಾಯಿಸುವುದರಲ್ಲಿದ್ದರು!



ಮಧ್ಯರಾತ್ರಿ ಹನ್ನೆರಡು ಹೊಡೆಯುವ ತನಕವೂ ವ್ಯಾಪಾರದ ವ್ಯವಹಾರವೇ ತಲೆಯಲ್ಲಿ ತಾಂಡವವಾಡುತ್ತಿದ್ದ ಕಾಸಿಮನಿಗೆ ನಿದ್ದೆಯೇ ಹತ್ತಲಿಲ್ಲ. ಅದೇಕೋ ಆತ ಹಾಸಿಗೆಯಿಂದೆದ್ದು ಅರಚಿಕೊಂಡ. ಮನೆಯೊಳಗಿಂದ ಹಾರಿ ಬಾಲಾಜಿಯವರ ಹಿತ್ತಿಲು ಸೇರಿದ್ದ. ಖದೀಜಾಳು ಸರ್ವನಾಶವಾಯಿತೆಂದು ಅರಚಿಕೊಂಡಳು. ಆದರೆ ಈ ಸಂದಿಗ್ಧ ಸಮಯದಲ್ಲಿ ಗೋಷಾ ಪದ್ಧತಿ ಆಕೆಯನ್ನು ತಡೆಯಲಿಲ್ಲ. ಗಂಡನನ್ನು ಹಿಂಬಾಲಿಸಿದಳು. ರೋಹಿಣಿಯಮ್ಮ ರಾತ್ರಿ ಹೊರಗೆ ಬಿಸಿನೀರು ಕಾಯಿಸಿದ ಬೆಂಕಿಯ ಮೇಲೆ ನೀರು ಹಾಕಲು ಮರೆತುದರಿಂದ ಗಾಳಿ ಬೀಸಿ, ಬೆಂಕಿ ಹಾರಿ ಮಾಡನ್ನು ಸೇರಿ

ಮನೆಯನ್ನು ಸುಡುವುದರಲ್ಲಿತ್ತು. ಮನೆಗೆ ನುಗ್ಗಿದ ಖದೀಜಾ ಮಲಗಿದ ರೋಹಿಣಿಯನ್ನೆಬ್ಬಿಸಿ ಪಕ್ಕದಲ್ಲಿದ್ದ ಮಗುವನ್ನು ಕೈಯಿಂದೆತ್ತಿ ಹಕ್ಕಿಯಂತೆ ಹೊರಗೆ ಹಾರಿದಳು. ಕಾಸಿಮನ ಆರ್ಭಟ ಆಗಲೆ ಬಾಲಾಜಿಯವರನ್ನೂ ಪಕ್ಕದ ಹತ್ತಾರು ಮನೆಮಂದಿಯನ್ನೂ ಎಬ್ಬಿಸಿತ್ತು. ಬಂದವರು ಬಾವಿಯಿಂದ ನೀರೆತ್ತಿದರು. ಕಾಸಿಮ್ ಉರಿಯುವ ಜ್ವಾಲೆಯ ಮೇಲೆ ಮಾಡಿನ ನೆತ್ತಿಯಲ್ಲಿ ನೀರು ಹಾರಿಸಿದ್ದನು. ಇನ್ನೊಂದರೆಚಣದಲ್ಲಿ ಸರ್ವನಾಶವಾಗಲಿದ್ದ ಮಹಡಿಯ ಮನೆ ಅಗ್ನಿದೇವನನ್ನು ವಂಚಿಸಿತು. ರೋಹಿಣಿಯಮ್ಮ ಖದೀಜನನ್ನು ಅಪ್ಪಿಹಿಡಿದರು. ಒಂದು ತಿಂಗಳಿನಿಂದ ಇಲ್ಲವಾಗಿದ್ದ ಪ್ರೇಮ ಇನ್ನೊಮ್ಮೆ ಕಾಣಿಸಿಕೊಂಡಿತು. ತನಗೆ ಮೃತ್ಯುವಾಗಬಹುದೆಂದು ನೆನೆಸಿದ್ದ ಕಾಸಿಮ್ ಇಂದು ಮೃತ್ಯುವಿನ ದವಡೆಯೊಳಗಿಂದ ಬಾಲಾಜಿಯವರನ್ನು ಹೊರಗೆಳೆದ. ಇದರ ಮೊದಲೆಂದೂ ಮರಹತ್ತದ ಬಾಲಾಜಿಯವರು ತಾನೆ ತೆಂಗಿನ ಮರಹತ್ತಿ ಹತ್ತಿಪ್ಪತ್ತು ಕಾಯಿ ಕಿತ್ತರು. ಕಾಸಿಂ ಮನೆಗೋಡಿ ನಾಲ್ಕು ಸೇರು ಅವಲಕ್ಕಿ, ಬೆಲ್ಲ ತಂದ. ಎಲ್ಲರೂ ತಿಂದು ನಕ್ಕುನಲಿದರು. ಭೇದವನ್ನು ಮರೆತು ಸ್ನೇಹದಿಂದ ಮೈ ಮರೆತರು. ರೋಹಿಣಿಯಮ್ಮ ಖದೀಜಾರು ಮಾತ್ರ ಮನೆಯೊಳಕ್ಕೆ ಹೋದರು. 'ನಿನ್ನ ಕಾಫಿಯನ್ನು ದಿನಾಲೂ ಕುಡಿಯಬೇಕೆಂದೇ ವಿಧಿಯಿದೆಯೇ' ಎಂದು ಸವಾಲು ಮಾಡಿದ ರೋಹಿಣಿಯಮ್ಮನವರಿಗೆ ಖದೀಜಾನನ್ನೂ ಕಾಫಿ ಕುಡಿಸುವ ಪುಣ್ಯ ಒದಗಿತು! ಅವಿವೇಕದ ಅಂಧಕಾರದಲ್ಲಿ ಕುರುಡರಾಗಿದ್ದ ಅವರ ಕಣ್ಣು ತೆರೆಯಿತು!.

**– ಮಹಾಬಲ ಭಂಡಾರಿ**


- ❒ ನೀವು ಓದಿದ ಕಥೆಯ ಪ್ರಧಾನ ಆಶಯ ಉತ್ತರವಾಗಿ ಬರುವಂತೆ ಸಾಧ್ಯವಿದ್ದಷ್ಟು ಪ್ರಶ್ನೆಗಳನ್ನು ತಯಾರಿಸಿರಿ.
- ❒ ಕಾಸಿಮ್ ಮತ್ತು ಬಾಲಾಜಿಯವರ ಕುಟುಂಬವು ವೈಷಮ್ಯ ಮರೆತು ಪುನಃ ಒಂದುಗೂಡಲು ಕಾರಣವಾದ ಘಟನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
- ❒ ನಿಮ್ಮ ತರಗತಿಯ ಸೌಹಾರ್ದ ಒಡನಾಟದ ಅನುಭವಗಳನ್ನು ದಿನಚರಿ ರೂಪದಲ್ಲಿ ಬರೆಯಿರಿ.
- ❒ ಸಾಮಾಜಿಕ ಸೌಹಾರ್ದತೆಗೆ ಪ್ರೇರಣೆ ನೀಡುವ ಘೋಷಣಾವಾಕ್ಯವನ್ನು ಬರೆದು ಭಿತ್ತಿಪತ್ರ ತಯಾರಿಸಿರಿ.
- ❒ ಕಾಸಿಮನ ಅತಿಥಿಯ ಬಾಯಿಂದ ಹೊರಟ ಕತೆಯು ಹಳ್ಳಿಯ ಆ ಎರಡು ನೆರೆಮನೆಗಳಲ್ಲಿ, ರೋಹಿಣಿ ಖದೀಜರ ಗೆಳೆತನದ ಈ ಪವಿತ್ರ ಬಾಳಲ್ಲಿ <u>ವಿಷದ ಬೀಜವನ್ನು ಬಿತ್ತಿತು.</u>

ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದ ನುಡಿಗಟ್ಟನ್ನು ಬಳಸಿಕೊಂಡು ಅರ್ಥವತ್ತಾದ ಎರಡು ವಾಕ್ಯಗಳನ್ನು ರಚಿಸಿರಿ.

- ❒ ಕೆಳಗೆ ಕೊಟ್ಟಿರುವ ಘಟನೆಗಳನ್ನು ವಿಸ್ತರಿಸಿ ಕಥೆಯೊಂದನ್ನು ಬರೆಯಿರಿ.
    - ಬೋಜಯ್ಯ ಮತ್ತು ನಿಂಗಣ್ಣ ನೆರೆಕರೆಯವರು.
    - ಬೋಜಯ್ಯನ ಮಗ ಭಾನು, ನಿಂಗಣ್ಣನ ಮಗ ರಾಜು.
    - ಭಾನು ನಿಂಗಣ್ಣನ ಮಾವಿನಮರದಿಂದ ಹಣ್ಣು ಕೊಯ್ದನು.
    - ನಿಂಗಣ್ಣನು ಭಾನುವನ್ನು ಬಯ್ದನು.
    - ಬೋಜಯ್ಯ ಮತ್ತು ನಿಂಗಣ್ಣ ಪರಸ್ಪರ ಶತ್ರುಗಳಾದರು.

- ಮನೆಯಲ್ಲಿ ಯಾರೂ ಇಲ್ಲದ ವೇಳೆ ರಾಜು ತನ್ನ ಮಾವಿನ ಮರಕ್ಕೆ ಹತ್ತಿದನು.
- ಜಾರಿ ಬಿದ್ದು ಪ್ರಜ್ಞೆ ತಪ್ಪಿತು.
- ಇದನ್ನು ನೋಡಿದ ಭಾನು ಕೂಡಲೇ ಉಪಚರಿಸಿ ಆಸ್ಪತ್ರೆಗೆ ಕರೆದೊಯ್ದನು.
- ತಾನು ಮಾಡಿದ ತಪ್ಪಿನ ಅರಿವಾಗಿ ನಿಂಗಣ್ಣನು ಬೋಜಯ್ಯನಲ್ಲಿ ಕ್ಷಮೆ ಯಾಚಿಸಿದನು.

## ಒಂದೆ ಜಾತಿ, ಒಂದೆ ಮತ, ಒಬ್ಬನೆ ದೇವರು



ನಾವೆಲ್ಲರೂ ಈ ಭೂಮಿಯಲ್ಲೇ ವಾಸಿಸುತ್ತೇವೆ. ಬಾಯಾರಿಕೆಯಾದಾಗ ಎಲ್ಲರಿಗೂ ನೀರು ಬೇಕು. ಎಲ್ಲರೂ ಉಸಿರಾಡುವುದು ಗಾಳಿಯನ್ನೇ. ಹುಟ್ಟಿದವರೆಲ್ಲರೂ ಒಂದಲ್ಲ ಒಂದು ದಿನ ಸಾಯುತ್ತಾರೆ. ಸುಖದುಃಖಗಳು ನಮ್ಮೆಲ್ಲರ ಜೀವನದಲ್ಲೂ ಬಂದೇ ಬರುತ್ತವೆ. ಹೀಗಿರುವಾಗ ಅವನು ಬಿಳಿಯ, ಇವನು ಕರಿಯ, ಅವನು ಶ್ರೀಮಂತ, ಇವನು ಬಡವ; ಅವನದು ಮೇಲು ಜಾತಿ, ಇವನದು ಕೀಳು ಜಾತಿ ಈ ರೀತಿಯಾಗಿ ನಮ್ಮ ನಮ್ಮಲ್ಲಿ ಭೇದವನ್ನು ಸೃಷ್ಟಿಸಿಕೊಂಡು ಹೊಡೆದಾಡುವುದು ಸರಿಯೇ? ಸರಿಯಲ್ಲ. ನಮ್ಮ ಜಾತಿ ಒಂದೆ. ನಾವೆಲ್ಲ ಮನುಷ್ಯರು. ನಮಗೆ ಧರ್ಮವೊಂದೆ, ಎಲ್ಲರ ದೇವನೊಬ್ಬನೆ ಎಂಬುದನ್ನು ತಿಳಿಯಬೇಕು. ನೆಮ್ಮದಿಯ ಜೀವನ ನಮ್ಮದಾಗಬೇಕು. ಸಮಾಜದಲ್ಲಿ ಶಾಂತಿಯನ್ನು ನೆಲೆನಿಲ್ಲಿಸಲು ಬಹಳಷ್ಟು ಮಂದಿ ಜ್ಞಾನಿಗಳು ಸಾರಿದ ಹಿತೋಪದೇಶಗಳಿವು. ಕೇರಳದ ನಾರಾಯಣ ಗುರುಗಳೂ ಈ ಬೋಧನೆಗಳನ್ನೇ ಜನರಿಗೆ ಸಾರಿ ಕೀರ್ತಿ ಪಡೆದವರು.

ಚೆಂಬಳಂತಿ ಎನ್ನುವುದು ತಿರುವನಂತಪುರದಿಂದ ಸುಮಾರು ಏಳುಮೈಲಿ ದೂರವಿರುವ ಒಂದು ಚಿಕ್ಕ ಹಳ್ಳಿ. ಅಲ್ಲೊಂದು ಮಣ್ಣಿನ ಪುಟ್ಟ ಗುಡಿಸಲು. ಆ ಮನೆಯಲ್ಲಿ ಕೃಷ್ಣವೈದ್ಯರು ವಾಸಿಸುತ್ತಿದ್ದರು. ಅವರದು ಈಳವ ಜಾತಿ. ಹೆಂಡತೆಗೆಯುವುದು, ಬೇಟೆಯಾಡುವುದು, ಹಳ್ಳಿಮದ್ದುಮಾಡುವುದು ಆ ವಂಶದವರ ಕುಲವೃತ್ತಿ. ಆ ಕಾಲದಲ್ಲಿ ಈಳವರನ್ನು ಅಸ್ಪೃಶ್ಯರು ಎಂದು ತಿಳಿಯಲಾಗಿತ್ತು. 'ಅಸ್ಪೃಶ್ಯರು' ಎಂದರೆ ಮೇಲುಜಾತಿಯವರಿಂದ ಮುಟ್ಟಿಸಿಕೊಳ್ಳಲಾಗದವರು. ಆದರೂ ವಿದ್ಯಾಭ್ಯಾಸ ಪಡೆಯುವ ಅವಕಾಶ ಅವರಿಗಿತ್ತು. ಆದುದರಿಂದಲೇ ಕೃಷ್ಣವೈದ್ಯರು ಕಲಿತು ವಿದ್ವಾಂಸರಾಗಿದ್ದರು. ಆಯುರ್ವೇದವನ್ನು ಅಭ್ಯಾಸಮಾಡಿದ್ದರು. ಆ ಹಳ್ಳಿಯಲ್ಲೇ ಪ್ರಸಿದ್ಧ ವೈದ್ಯರಾಗಿ ಹೆಸರು ಪಡೆದಿದ್ದರು.

ಕೃಷ್ಣವೈದ್ಯರ ತಂಗಿ ಕುಟ್ಟಿಯಮ್ಮ. ಆಕೆಯನ್ನು ಅದೇ ಹಳ್ಳಿಯ ಮಾದನ್ ಆಶಾನ್ ಎಂಬವರಿಗೆ ಮದುವೆ ಮಾಡಿ ಕೊಡಲಾಗಿತ್ತು. ಮಾದನ್ ಆಶಾನ್ ಕೂಡಾ ವಿದ್ವಾಂಸರಾಗಿದ್ದರು. ಅಲ್ಲದೆ ಶಾಲೆಯೊಂದರಲ್ಲಿ ಆಶಾನ್ ಆಗಿದ್ದರು. 'ಆಶಾನ್' ಎಂದರೆ ಗುರು ಎಂದರ್ಥ. ಈ ದಂಪತಿಗಳಿಗೆ ಕ್ರಿ.ಶ. 1855 ಆಗಸ್ಟ್ 7 ರಂದು ಮಗನೊಬ್ಬನು ಜನಿಸಿದನು. ಅವನಿಗೆ ಆ ದಂಪತಿಗಳು ನಾರಾಯಣ ಎಂದು ಹೆಸರಿಟ್ಟರು. ಮುದ್ದಿನಿಂದ ಅವನನ್ನು ನಾಣು ಎಂದು ಕರೆದರು.

ನಾಣು ಎಳೆಯವನಾಗಿರುವಾಗ ನಡೆದ ಸಂಗತಿಯಿದು. ಅದೊಮ್ಮೆ ಅವನ ತಾಯಿ ದೇವರಿಗೆ ಅರ್ಪಿಸಲೆಂದು ಬಾಳೆಹಣ್ಣುಗಳನ್ನು ತೆಗೆದಿರಿಸಿದ್ದಳಂತೆ. ಆಗ ಬಾಲಕ ನಾಣು ಅವುಗಳನ್ನು ಪೂಜೆಗೆ ಮೊದಲೇ ತೆಗೆದು ತಿಂದು ಸುಮ್ಮನೆ ಕುಳಿತನಂತೆ. ತಾಯಿ ಗಾಬರಿಗೊಂಡು 'ಏಕೆ ಹಾಗೆ ಮಾಡಿದೆ? ದೇವರು ಕೋಪಿಸಲಾರನೇ?' ಎಂದು ಕೇಳಿದಳು. ಆಗ ನಾಣು, 'ನನ್ನ ಹೊಟ್ಟೆತುಂಬಿತು. ನನಗೆ ತೃಪ್ತಿಯಾಯಿತು. ಇದರಿಂದ ದೇವರಿಗೂ ಸಂತೋಷವಾಗುತ್ತದೆ' ಎಂದು ಹೇಳಿದನಂತೆ.

ಶಾಲೆಯಲ್ಲಿ ಕಲಿಯುತ್ತಿರುವಾಗಲೇ ಜಾತೀಯಗೊಂದಲದ ತಿಳಿವು ನಾಣುವಿಗಾಯಿತು. ಮೇಲು ಜಾತಿ ಕೀಳುಜಾತಿಯೆಂಬ ಭೇದಭಾವ ಬಾಲಕ ನಾಣುವಿಗೆ ಅಸಹನೀಯವಾಯಿತು.

ನಾಣು ಇನ್ನೂ ಚಿಕ್ಕವ. ಕಲಿಯಬೇಕೆಂಬ ಆಸೆಯೋ ಬಹಳ. ಆದರೆ ಹತ್ತಿರ ಬೇರೆ ಶಾಲೆ ಇರಲಿಲ್ಲ. ದೂರದ ಶಾಲೆಗೆ ಕಳುಹಿಸಲು ಹೆತ್ತವರಿಗೆ ಧೈರ್ಯ ಸಾಲದು. ಇದರಿಂದಾಗಿ ನಾಣುವಿಗೆ ತಾನು ಬಯಸಿದ ರೀತಿಯಲ್ಲಿ ಕಲಿಯಲು ಆಗಲಿಲ್ಲ. ಓದು ಬಿಟ್ಟು ಮನೆಯಲ್ಲಿಯೇ ಉಳಿಯಬೇಕಾಯಿತು. ಆವೇಳೆ ಮನೆಗೆಲಸದಲ್ಲಿ ಅವನು ಸಹಾಯಕನಾದನು. ದನಕರುಗಳನ್ನು ಮೇಯಿಸುವುದೂ ಬೇಸಾಯದಲ್ಲಿ ಸಹಕರಿಸುವುದೂ ಅವನ ಕೆಲಸಗಳಾದುವು.

ಜಾಣನಾಣುವಿನ ಬದುಕು ಬರಿಯ ದನಕಾಯುವುದರಲ್ಲೇ ಕಳೆದು ಹೋಗುವುದು ಮಾವನಾದ ಕೃಷ್ಣವೈದ್ಯರಿಗೆ ಸರಿದೋರಲಿಲ್ಲ. ಅವರು ನಾಣುವನ್ನು ಹೆಚ್ಚಿನ ಓದಿಗಾಗಿ ಕರುನಾಗಪಳ್ಳಿ ಆಶಾನರ ಬಳಿಗೆ ಕಳುಹಿಸಿದರು. ನಾಣುವು ಅಲ್ಲಿ ಕಲಿಯತೊಡಗಿದನು. ಗುರುಗಳ ಪ್ರೀತಿಗೆ ಪಾತ್ರನಾದನು. ಗುರುಗಳು ಅವನನ್ನು ಕೆಳಗಿನ ತರಗತಿಗಳಿಗೆ ಪಾಠ ಹೇಳಲು ನಿಯಮಿಸಿದರು. ಏಕಾಂತ, ಧ್ಯಾನ, ಪ್ರಾರ್ಥನೆ ಇತ್ಯಾದಿ ಅವನ ದಿನಚರಿಯಾಗಿತ್ತು. ಸನ್ಯಾಸಿಯಂತೆ ಮರಗಿಡಗಳ ಎಲೆ, ಚಿಗುರು, ಬೇರುಗಳನ್ನು ಜಗಿದು ರಸಕುಡಿಯುತ್ತಿದ್ದನು. ಕಲಿಯುತ್ತಿರುವ ಆ ವೇಳೆಯಲ್ಲಿಯೇ ನಾಣುವು ಅತಿಸಾರವೆಂಬ ರೋಗಕ್ಕೆ ತುತ್ತಾಗಿ ಬಳಲಿದನು. ಆಗ ಮಾವ ಕೃಷ್ಣವೈದ್ಯರು ಅವನನ್ನು ಮನೆಗೆ ಕರೆದೊಯ್ದರು. ರೋಗದಿಂದ ಚೇತರಿಸಿದ ಮೇಲೆ ನಾಣು ವಿದ್ಯಾಭ್ಯಾಸವನ್ನು ಮುಂದುವರಿಸಲಿಲ್ಲ.

ನಾಣುವಿಗೆ 24 ವರ್ಷ ಪ್ರಾಯವಾಯಿತು. 'ತಾನೇ ಶಾಲೆಯೊಂದನ್ನು ತೆರೆದರಾಗದೇ?' ಎಂಬ ಯೋಚನೆ ಹೊಳೆಯಿತು. ಅದರಂತೆ 'ಕಡಕ್ಕಾವೂರು' ಎಂಬಲ್ಲಿ ವಿದ್ಯಾಲಯವೊಂದನ್ನು ಪ್ರಾರಂಭಿಸಿದರು. ಅನಂತರ 'ಅಂಜಿತೆಜ್' ಎಂಬಲ್ಲಿ ಇನ್ನೊಂದು ಶಾಲೆಯನ್ನು ತೆರೆದರು. ನಾಣುಆಶಾನ್ ಎಂದೇ ಪ್ರಸಿದ್ಧರಾದರು.

ಅಂಜಿತೆಜ್ ಶಾಲೆಯ ಸಮೀಪ ಒಂದು ದೇವಾಲಯವಿತ್ತು. ಅಲ್ಲಿ ಭಗವದ್ಗೀತೆಯ ವಿವರಣೆಯನ್ನು

ಕೊಡುವ ಕೆಲಸವೂ ನಾಣು ಆಶಾನರದಾಯಿತು. ಆ ಸಮಯದಲ್ಲಿ ಹೆಚ್ಚು ಹೆಚ್ಚು ಧಾರ್ಮಿಕ ಪುಸ್ತಕಗಳನ್ನು ಓದಿದರು. ವಿಷಯಗಳನ್ನು ತಾವೇ ವಿಚಾರ ಮಾಡಿ ತಿಳಿದುಕೊಂಡರು. ದೇವರಲ್ಲಿ ಭಕ್ತಿ ಹೆಚ್ಚುತ್ತಾ ಹೋಯಿತು.

ಸತ್ಯವೆಂದರೇನು? ಎಂಬುದನ್ನು ತಿಳಿಯುವುದೇ ಅವರ ಉದ್ದೇಶವಾಯಿತು. ಅದಕ್ಕಾಗಿ ಊರೂರು ಅಲೆದರು. ದೇವಾಲಯಗಳನ್ನು ಸಂದರ್ಶಿಸಿದರು. ಬೆಟ್ಟಕಾಡುಗಳಲ್ಲಿ ಸುತ್ತಾಡಿದರು. ದೇವರನ್ನು ಭಕ್ತಿಯಿಂದ ಸ್ತುತಿಸಿದರು. ಹಲವು ವಿದ್ವಾಂಸರನ್ನೂ ಸಾಧುಸಂತರನ್ನೂ ಭೇಟಿಯಾದರು. ಕೃತಿಗಳನ್ನು ಅಧ್ಯಯನ ಮಾಡಿದರು. ಯೋಗ ವಿದ್ಯೆಯನ್ನೂ ಕಲಿತರು. ಜನರಿಗೆ ಅವರಲ್ಲಿ ಭಕ್ತಿಗೌರವಗಳು ಮೊಳೆತು ಅವರನ್ನು 'ಸ್ವಾಮಿ' ಎಂದು ಕರೆದರು.

ಮರುತ್ವಮಲ ಎಂಬುದೊಂದು ಬೆಟ್ಟ, ಆ ಬೆಟ್ಟದ ಬುಡದಲ್ಲಿ ಒಂದು ವಿಶಾಲವಾದ ಗುಹೆ. ಸುತ್ತಮುತ್ತ ಪ್ರಶಾಂತ ವಾತಾವರಣ. ಅದನ್ನು ತಮ್ಮ ತಪಸ್ಸಿಗೆ ಯೋಗ್ಯ ಸ್ಥಳವನ್ನಾಗಿ ಸ್ವಾಮಿಗಳು ಆರಿಸಿಕೊಂಡರು. ಆ ಗುಹೆಯಲ್ಲಿಯೇ ಬಹುಕಾಲ ಧ್ಯಾನಮಗ್ನರಾಗಿ ತಪಸ್ಸನ್ನು ಆಚರಿಸಿದರು. ಇಲ್ಲಿ ಅವರಿಗೆ ಜ್ಞಾನ ಸಿದ್ಧಿಯಾಯಿತು.

'ಗುಹೆಯಲ್ಲಿ ತಪಸ್ವಿಗಳೊಬ್ಬರಿದ್ದಾರೆ' ಎಂಬ ಸುದ್ದಿ ಅದು ಹೇಗೋ ಜನರಿಗೆ ತಿಳಿಯಿತು. ಈ ವಿಚಿತ್ರ ಸಾಧುವನ್ನು ನೋಡಲು ಜನ ಗುಂಪು ಗುಂಪಾಗಿ ಬರತೊಡಗಿದರು. ಧ್ಯಾನ ತ್ಯಜಿಸಿದ ನಾಣುಸ್ವಾಮಿಗಳು ಜನರೊಡನೆ ತಾವೂ ಬೆರೆತರು. ಅವರೊಂದಿಗೇ ಜೀವಿಸತೊಡಗಿದರು. ಬಡವ–ಶ್ರೀಮಂತ, ಮೇಲು–ಕೀಳು ಎಂಬ ಭಾವನೆ ಅವರಲ್ಲಿ ಇರಲೇ ಇಲ್ಲ.

ಸಮುದ್ರ ಕರಾವಳಿಯಲ್ಲಿ ಸುತ್ತಾಡಿದಾಗ ನಾರಾಯಣಗುರುಗಳಿಗೆ ಮೀನುಗಾರರ ಬದುಕಿನ ನಿಕಟ ಪರಿಚಯವಾಯಿತು; ಅವರೊಂದಿಗೆ ಬೆರೆತರು. ಅವರ ಕೆಲಸದಲ್ಲಿ ತಾವೂ ಸೇರಿದರು. ಅವರಿತ್ತ ಮೀನು ತಿಂದರು. "ಮೀನು ಬಡವರ ಆಹಾರ" ಎಂದರು. ಸನ್ಯಾಸಿಯಾಗಿ ಮೀನು ತಿಂದುದನ್ನು ನೋಡಿ ಕೆಲವರು ನಾರಾಯಣಗುರುಗಳನ್ನು 'ವಿಚಿತ್ರ ಸ್ವಾಮಿಗಳು' ಎಂದು ಹೀಯಾಳಿಸಿದರು.

ನಾರಾಯಣಗುರುಗಳು ಒಮ್ಮೆ ಉಗಿಬಂಡಿಯಲ್ಲಿ ಮದ್ರಾಸಿಗೆ ಪಯಣಿಸುತ್ತಿದ್ದರು. ಆಗ ಹತ್ತಿರ ಕುಳಿತವರಲ್ಲಿ ಒಬ್ಬರು ಅವರೊಡನೆ 'ನಿಮ್ಮ ಹೆಸರೇನು?' ಎಂದು ಕೇಳಿದರು. 'ನಾರಾಯಣ' ಗುರುಗಳೆಂದರು. 'ಜಾತಿಯಾವುದು?' ಎಂದು ಕೇಳಲು 'ನನ್ನನ್ನು ನೋಡಿದರೆ ಯಾವ ಜಾತಿಯೆಂದು ತೋರುತ್ತದೆ?' ಗುರುಗಳು ಪ್ರಶ್ನಿಸಿದರು. 'ನೋಡಿದರೆ ತಿಳಿಯುವುದಿಲ್ಲ' ಎಂದು ಆ ವ್ಯಕ್ತಿ ಹೇಳಿದಾಗ ಗುರುಗಳು ನಗುತ್ತಾ 'ನೋಡಿದರೆ ತಿಳಿಯಲಾಗದುದು ಹೇಳಿದರೆ ತಿಳಿದೀತೇ?' ಎಂದು ಕೇಳಿದರು.

ಕೆಳವರ್ಗದವರು ಮಾಡುವ ಭೂತಾರಾಧನೆಯನ್ನು ನಾರಾಯಣಗುರುಗಳು ಅನಾಗರಿಕವೆನ್ನಲಿಲ್ಲ. ಆದರೆ ಅದರ ಹೆಸರಿನಲ್ಲಿ ಜರಗುವ ಕುಡಿತ, ಪ್ರಾಣಿವಧೆಯನ್ನು ವಿರೋಧಿಸಿದರು. 'ಕೆಟ್ಟ ಆಚರಣೆಗಳನ್ನು ಕೊನೆಗೊಳಿಸಲೇ ಬೇಕು. ಮದ್ಯ ನಿಜಕ್ಕೂ ಒಂದು ವಿಷ. ಅದರ ತಯಾರಿ, ಮಾರಾಟ, ಕುಡಿತ ಖಂಡಿತ ತರವಲ್ಲ' ಎಂದರು. ಕೇರಳದ ಉದ್ದಗಲಕ್ಕೂ ಸಂಚರಿಸಿ ಬೋಧನೆಯಿತ್ತರು. ಭೂತಪ್ರೇತಗಳ ಆರಾಧನೆಯ ಬದಲು ಶಿವ, ಸುಬ್ರಹ್ಮಣ್ಯ, ಗಣೇಶರನ್ನು ಪೂಜಿಸುವುದು ಒಳಿತೆಂದು ಮನದಟ್ಟುಮಾಡಿದರು.

ನಾರಾಯಣಗುರುಗಳ ಕಾಲದಲ್ಲಿ ಕೆಳವರ್ಗದವರಿಗೆ ದೇವಾಲಯ ಪ್ರವೇಶವಿರಲಿಲ್ಲ. ಇದನ್ನು ವಿರೋಧಿಸಿದ್ದ

ಗುರುಗಳು ತಾವೇ ಒಂದು ದೇವಾಲಯವನ್ನು ಸ್ಥಾಪಿಸಲು ನಿರ್ಧರಿಸಿದರು. ನೆಯ್ಯಾರ್ ನದೀತೀರದ ಚೆರುಕುನ್ನು ಎಂಬಲ್ಲಿ ದಲಿತ ಭಕ್ತಜನರ ಸಹಾಯದಿಂದ ಶಿವದೇವಾಲಯವೊಂದನ್ನು ನಿರ್ಮಿಸಿದರು. ಸ್ವತಃ ನಾರಾಯಣ ಗುರುಗಳೇ ಅಲ್ಲಿ ಶಿವಲಿಂಗವನ್ನು ಸ್ಥಾಪಿಸಿದರು.

ನಾರಾಯಣಗುರುಗಳು ಸುಮಾರು ಮೂವತ್ತಕ್ಕಿಂತಲೂ ಹೆಚ್ಚು ದೇವಾಲಯಗಳನ್ನು ಸ್ಥಾಪಿಸಿದರು. ಕೇರಳ, ತಮಿಳುನಾಡು, ಕರ್ನಾಟಕಗಳಲ್ಲಿ ಅವರು ಸ್ಥಾಪಿಸಿದ ದೇವಾಲಯಗಳಿವೆ. ಅವರ ತತ್ತ್ವಗಳು ಶ್ರೀಲಂಕಾದ ವರೆಗೂ ವ್ಯಾಪಿಸಿವೆ. ಮಾನವರೆಲ್ಲರಿಗೂ ಈ ದೇವಾಲಯಗಳಲ್ಲಿ ಮುಕ್ತ ಪ್ರವೇಶವಿದೆ. ಪ್ರಕೃತಿಯ ಮನಮೋಹಕ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ಈ ದೇವಾಲಯಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆದಿವೆ. ಪರಿಸರವೆಲ್ಲಾ ಶುಚಿ. ಸುತ್ತಲೂ ಉದ್ಯಾನ. ಬಳಿಯಲ್ಲೇ ಶುದ್ಧನೀರಿನ ಕೊಳ. ಗಾಳಿ ಬೆಳಕಿಗೆ ತಡೆಯಿಲ್ಲ. ದೇವಾಲಯಕ್ಕೆ ಹೊಂದಿಕೊಂಡು ಪ್ರಾಥಮಿಕ ಹಂತದಿಂದ ತೊಡಗಿ ಪ್ರೌಢಶಾಲೆಯವರೆಗೂ ಕಲಿಸುವ ವಿದ್ಯಾಲಯಗಳು. ಹತ್ತಿರವೇ ವಿದ್ಯಾರ್ಥಿನಿಲಯ – ಇವೆಲ್ಲವೂ ಇವೆ. ಪೂಜಾವಿಧಾನಗಳಲ್ಲಿ ಸಂಪೂರ್ಣ ತರಬೇತಿ ಪಡೆದ ಕೆಳವರ್ಗದವರೇ ಈ ದೇವಾಲಯಗಳಲ್ಲಿ ಪೂಜೆಮಾಡುತ್ತಾರೆ. ಚೆರುಕುನ್ನು, ಅರವಿಪುರ, ವೈಕಂ, ಕುನುಪುರ, ವರ್ಕಲ, ಶಿವಗಿರಿಯೇ ಮೊದಲಾದ ಕಡೆಗಳಲ್ಲಿರುವ ದೇವಾಲಯಗಳು ಪ್ರವಾಸಿಗರನ್ನು ತಮ್ಮತ್ತ ಸೆಳೆಯುವ ಕೇಂದ್ರಗಳೂ ಆಗಿವೆ. 'ದಕ್ಷಿಣಕಾಶಿ' ಎಂದು ಪ್ರಸಿದ್ಧವಾದ ವರ್ಕಲದ ಸಮೀಪ ಶಿವಗಿರಿಯಲ್ಲಿ ಶಾರದಾ ಮಠವೊಂದನ್ನು ಸ್ಥಾಪಿಸಿದರು. ಅಮೃತಶಿಲೆಯಲ್ಲಿ, ಕುಳಿತ ಶಾರದೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. "ವಿದ್ಯೆಯ ಮೂಲಕ ಜ್ಞಾನಿಗಳಾಗಿ" ಎಂಬ ಸಂದೇಶವನ್ನು ಸಾರಿದರು. ಮಂಗಳೂರಿನ ಕುದ್ರೋಳಿ ಎಂಬಲ್ಲಿ ಶಿವದೇವಾಲಯವೊಂದನ್ನು ಸ್ಥಾಪಿಸಿದರು. ಅದು ಶ್ರೀ ಗೋಕರ್ಣನಾಥೇಶ್ವರ ದೇವಾಲಯ ಎಂದು ಪ್ರಸಿದ್ಧವಾಗಿದೆ.



'ಸರ್ವಧರ್ಮಗಳ ಸಾರವೂ ಒಂದೇ' ಎಂದು ಸಾರಿದ ನಾರಾಯಣಗುರುಗಳು, ಧರ್ಮಗಳ ತಿರುಳನ್ನು ಪರಸ್ಪರ ಅರಿತುಕೊಳ್ಳುವ ಉದ್ದೇಶಕ್ಕಾಗಿ ಆಲ್ವಾಯಿಯಲ್ಲಿ 'ಮತ ಯಾವುದಾದರೇನು? ಮನುಷ್ಯ ಒಳ್ಳೆಯವನಾದರೆ ಸಾಕು' ಎಂದರು. 'ಮಾನವರೆಲ್ಲರೂ ಒಂದೆ ಜಾತಿ' ಎಂದು ಉಪದೇಶಿಸಿದರು.

ಆಗ ಸ್ತ್ರೀಯರಿಗೆ ಸಮಾಜದಲ್ಲಿ ಸಮಾನ ಸ್ಥಾನವಿರಲಿಲ್ಲ. ಅವರ ಕೆಲಸಗಳೇನಿದ್ದರೂ ಮನೆಯೊಳಗೇ. ವಿದ್ಯಾಭ್ಯಾಸದ ಹಕ್ಕು ಅವರಿಗಿರಲಿಲ್ಲ. ಕೆಳವರ್ಗದ ಸ್ತ್ರೀಯರಂತೂ ಶಾಲೆಯ ಮೆಟ್ಟಿಲನ್ನೇ ಹತ್ತಲಾಗದು. ನಾರಾಯಣಗುರುಗಳು ಇಲ್ಲೂ ಸುಧಾರಣೆಯನ್ನು ತಂದರು. ಸ್ತ್ರೀಯರು ಪುರುಷರಂತೆ ವಿದ್ಯಾರ್ಜನೆ ಮಾಡಬೇಕೆಂದು ಹೇಳಿದರು.

ಸಮಾಜದಲ್ಲಿನ ಮೂಢನಂಬಿಕೆಗಳನ್ನು ಹೋಗಲಾಡಿಸಲು ನಾರಾಯಣಗುರುಗಳು ಸಾಕಷ್ಟು ಪ್ರಯತ್ನ ಮಾಡಿದರು. 'ವಿವೇಕೋದಯಂ' ಎಂಬ ಪತ್ರಿಕೆಯ ಮೂಲಕ ಕುರುಡುನಂಬಿಕೆಗಳ ವಿರುದ್ಧ ಹೋರಾಡಿದರು.

ನಾರಾಯಣಗುರುಗಳು ಕೇರಳದ ಜಾತೀಯ ಗೊಂದಲಗಳ ವಿರುದ್ಧ ಹೋರಾಡಲು, 'ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ' ಎಂಬ ಸಂಸ್ಥೆಯನ್ನು ರೂಪಿಸಿದರು. ಶಿಷ್ಯರು ಈ ಸಂಸ್ಥೆಯ ಮೂಲಕವಾಗಿಯೇ ನಾರಾಯಣಗುರುಗಳ ಸಂದೇಶವನ್ನು ಪ್ರಚಾರ ಮಾಡತೊಡಗಿದರು. ಹೊಸ ಜಾಗೃತಿಯನ್ನು ಉಂಟುಮಾಡಿದರು. ಇವರ ಪ್ರಯತ್ನದಿಂದಲೇ ತಿರುವಾಂಕೂರು ರಾಜ್ಯವು ಎಲ್ಲ ಜಾತಿಯವರಿಗೂ ದೇವಾಲಯಕ್ಕೆ ಪ್ರವೇಶವಿತ್ತ ಭಾರತದ ಮೊದಲ ರಾಜ್ಯ ಎಂಬ ಹೆಸರುಪಡೆಯಿತು.

ನಾರಾಯಣಗುರುಗಳಿಗೆ ಸಂಸ್ಕೃತ, ಮಲೆಯಾಳ, ತಮಿಳು ಭಾಷೆಗಳ ಅಪಾರ ಪಾಂಡಿತ್ಯವಿತ್ತು. ಕವಿಗಳೂ ಆಗಿದ್ದ ಅವರು ಸಂಸ್ಕೃತದಲ್ಲಿ 'ದರ್ಶನಮಾಲಾ' ಹಾಗೂ ಮಲೆಯಾಳದಲ್ಲಿ 'ಆತ್ಮೋಪದೇಶ ಶತಕಂ' ಎನ್ನುವ ಕೃತಿಗಳನ್ನು ರಚಿಸಿರುವರು. ತಮಿಳು ಗ್ರಂಥವಾದ 'ತಿರುಕ್ಕುರಳ'ನ್ನು ಮಲೆಯಾಳಕ್ಕೆ ಭಾಷಾಂತರಿಸಿದ್ದಾರೆ.

ಮನುಷ್ಯರೆಲ್ಲರಿಗೂ ಒಂದೆ ಜಾತಿ, ಒಂದೆ ಮತ, ಒಬ್ಬನೆ ದೇವರು. ಸಂಘಟನೆಯಿಂದ ಬಲಿಷ್ಠರಾಗಬೇಕು, ವಿದ್ಯೆಯಿಂದ ಪ್ರಗತಿಹೊಂದಬೇಕು. ವಿದ್ಯೆಗಳಿಸಿ ಜ್ಞಾನಿಗಳಾಗಬೇಕು, ಜ್ಞಾನಿಗಳಾಗಿ ಸುಖಕಾಣಬೇಕು. ಮನುಷ್ಯರು ಮಾತ್ಸರ್ಯವನ್ನು ತ್ಯಜಿಸಬೇಕು. ಸೋದರತ್ವದಿಂದ ಬಾಳಬೇಕು. ತನ್ನಂತೆ ಪರರಿಗೂ ಹಿತವನ್ನೇ ಬಯಸುವುದು ನಿಜವಾದ ಸಮಾಜ ಸೇವೆ. ಹೆದರಿಕೆ ಮತ್ತು ಪಾಪಗಳ ಹುಟ್ಟಿಗೆ ಅಜ್ಞಾನವೇ ಕಾರಣ. ಜ್ಞಾನದಿಂದ ಭೀತಿ ನಾಶವಾಗಿ ಸಂತೋಷ ಹುಟ್ಟಿಕೊಳ್ಳುತ್ತದೆ. ನಮ್ಮ ಬದುಕು ನಿಂತ ನೀರಾಗಬಾರದು, ಹರಿಯುತ್ತಲೇ ಇರುವ ನದಿಯಾಗಬೇಕು; ಹೀಗಿದ್ದರೆ ಮಾತ್ರವೇ ನಾವು ನಿತ್ಯ ಉಲ್ಲಸಿತರಾಗಿರಬಹುದು. ಕೇವಲ ಹುಟ್ಟಿನಿಂದ ದೊಡ್ಡವರಲ್ಲ, ಒಳ್ಳೆಯ ಗುಣದಿಂದ ಮಾತ್ರ ದೊಡ್ಡವರಾಗುತ್ತೇವೆ. ಆತ್ಮವಿಶ್ವಾಸವಿದ್ದರೆ ಎಲ್ಲವನ್ನೂ ಸಾಧಿಸಬಹುದು – ಇವೇ ಮೊದಲಾದವುಗಳು ಮಾನವರ ಉದ್ಧಾರಕ್ಕಾಗಿ ನಾರಾಯಣಗುರುಗಳು ಸಾರಿದ ತತ್ತ್ವಗಳಾಗಿವೆ.

ಮಾನವ ಸಮಾಜದ ಉದ್ಧಾರಕ್ಕಾಗಿ, ದಲಿತರ ಏಳಿಗೆಗಾಗಿ, ದೇಶದ ಪ್ರಗತಿಗಾಗಿ ನಿರಂತರ ದುಡಿದ ನಾರಾಯಣಗುರುಗಳು ತಮ್ಮ 72ನೇ ವಯಸ್ಸಿನಲ್ಲಿ ತೀವ್ರ ಕಾಯಿಲೆಗೆ ತುತ್ತಾದರು. ಎಷ್ಟು ಚಿಕಿತ್ಸೆ ನೀಡಿದರೂ ಫಲಕಾರಿಯಾಗಲಿಲ್ಲ. 1928 ಸೆಪ್ಟೆಂಬರ್ 29 ರಂದು ಅವರು ಇಹಲೋಕವನ್ನು ತ್ಯಜಿಸಿದರು. ದಿವ್ಯಚೇತನವೊಂದು

ಪರಮಾತ್ಮನಲ್ಲಿ ಲೀನವಾಯಿತು. ಶಾಶ್ವತವಲ್ಲದ ದೇಹ ಅಳಿಯಿತು. ಚಿರಸ್ಥಾಯಿಯಾದ ಕೀರ್ತಿ ಉಳಿಯಿತು. ವರ್ಕಲದ ಶಿವಗಿರಿಯಲ್ಲಿ ಅವರ ಸಮಾಧಿಯನ್ನು ಇಂದೂ ನಾವು ಕಾಣಬಹುದು. ಈಗ ಅದು ಒಂದು ಪ್ರಸಿದ್ಧ ಯಾತ್ರಾಸ್ಥಳವೂ ಆಗಿದೆ.

❐ ಮೇಲಿನ ಪಾಠಭಾಗವನ್ನು ಆಧಾರವಾಗಿರಿಸಿ ನಾರಾಯಣಗುರುಗಳ ಜೀವನದ ಪ್ರಧಾನ ಘಟನೆಗಳನ್ನು ಆಯ್ದು ವ್ಯಕ್ತಿಪರಿಚಯ ಬರೆಯಿರಿ.

❐ ಮಾನವಸಮಾಜದ ಉದ್ಧಾರಕ್ಕಾಗಿ ನಾರಾಯಣಗುರುಗಳು ಕೈಗೊಂಡ ಸಮಾಜಸೇವೆಗಳನ್ನು ಪರಿಚಯಿಸುವ ಟಿಪ್ಪಣಿಯೊಂದನ್ನು ತಯಾರಿಸಿರಿ.

- "ಸಮಾಜದಲ್ಲಿ ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಾಕಷ್ಟು ಪ್ರಯತ್ನ ಮಾಡಿದ ನಾರಾಯಣ ಗುರುಗಳು 'ವಿವೇಕೋದಯಂ' ಎಂಬ ಪತ್ರಿಕೆಯ ಮೂಲಕ ಕುರುಡು ನಂಬಿಕೆಗಳ ವಿರುದ್ಧ ಹೋರಾಡಿದರು".

❐ ಮೇಲಿನ ಸಂಯುಕ್ತ ವಾಕ್ಯವನ್ನು ಈ ರೀತಿ ಸರಳವಾಕ್ಯಗಳಾಗಿ ಬರೆಯಲು ಸಾಧ್ಯವಿದೆ.

- ಸಮಾಜದಲ್ಲಿ ಮೂಢನಂಬಿಕೆಗಳನ್ನು ಹೋಗಲಾಡಿಸಲು ನಾರಾಯಣಗುರುಗಳು ಸಾಕಷ್ಟು ಪ್ರಯತ್ನ ಮಾಡಿದರು.
- ಇವರು 'ವಿವೇಕೋದಯಂ' ಎಂಬ ಪತ್ರಿಕೆಯ ಮೂಲಕ ಕುರುಡುನಂಬಿಕೆಗಳ ವಿರುದ್ಧ ಹೋರಾಡಿದರು.

❐ ಕೆಳಗಿನ ವಾಕ್ಯಗಳನ್ನು ಸರಳವಾಕ್ಯಗಳಾಗಿ ಬರೆಯಿರಿ.

- ಸಮುದ್ರ ಕರಾವಳಿಯಲ್ಲಿ ಸುತ್ತಾಡಿದಾಗ ನಾರಾಯಣಗುರುಗಳಿಗೆ ಮೀನುಗಾರರ ಬದುಕಿನ ನಿಕಟ ಪರಿಚಯವಾಯಿತು.
- ಸನ್ಯಾಸಿಯಾಗಿ ಮೀನು ತಿಂದುದನ್ನು ನೋಡಿ ಕೆಲವರು ನಾರಾಯಣಗುರುಗಳನ್ನು 'ವಿಚಿತ್ರ ಸ್ವಾಮಿಗಳು' ಎಂದು ಹೀಯಾಳಿಸಿದರು.

❐ ನಾರಾಯಣಗುರುಗಳಂತೆ ಸಮಾಜದ ಪ್ರಗತಿಗಾಗಿ ದೀನದಲಿತರ ಏಳಿಗೆಗಾಗಿ ದುಡಿದ ಮಹನೀಯರ ಕುರಿತು ಮಾಹಿತಿ ಸಂಗ್ರಹಿಸಿ ವ್ಯಕ್ತಿಪರಿಚಯ ಸಂಚಿಕೆ ತಯಾರಿಸಿರಿ.

❐ 'ಸಮಾಜದ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾತ್ರ' ಎಂಬ ವಿಷಯದ ಬಗ್ಗೆ ಭಾಷಣ ತಯಾರಿಸಿ ತರಗತಿಯ ಬಾಲಸಭೆಯಲ್ಲಿ ಭಾಷಣ ಮಾಡಿರಿ.

# ಮೇಲು ಕೀಳು ಎಲ್ಲಿದೆ

ಮೇಲು ಕೀಳು ಎಲ್ಲಿದೆ,
ಬುವಿ ಬಾನಿಗು ಕಿರಿದೇ?
ಬಿಳಿ ಕಪ್ಪನು ಜರಿವುದೇ,
ನೆಲ ಮುಗಿಲನು ಹಳಿವುದೇ?

ಭೇದವಿಲ್ಲ ಇಡೀ ನೆಲಕೆ ಬೆಳಕೀಯುವ ರವಿಗೆ
ಭೇದವೆಲ್ಲಿ ಎಲ್ಲೆಡೆಯೂ ಹಾದು ಬರುವ ಗಾಳಿಗೆ?
ಭೇದವುಂಟೆ ನೀರಿಗೆ, ಭೂಮಿ ಚಂದ್ರ ತಾರೆಗೆ,
ಹೇಗೆ ಬಂತು ಇಂಥ ಭೇದ ಬುದ್ಧಿವಂತ ಮನುಜಗೆ?

ಎಲ್ಲರ ಮೈಯೊಳಗೂ ಹರಿಯುತ್ತಿದೆ ರಕ್ತವೇ,
ಹಸಿವು ದಾಹ ಎಲ್ಲರಿಗೂ ಒಂದೇ ಸಮ ಕತ್ತಲೆ.
ಮೇಲು ಕೀಳು ಇರದೆ ಇಲ್ಲ ಚಾರಿತ್ರ್ಯದ ಮಟ್ಟಿಗೆ
ಎಲ್ಲ ಜೀವ ಚಲಿಸುವುದೂ ಯಮನು ಇರುವ ನಿಟ್ಟಿಗೇ.

ಕಾಳಿನ ಜೊತೆ ಕಸಕಡ್ಡಿ ಸೇರಿ ಬಾರದೇನು?
ಗಾಳಿಯೊಡನೆ ಧೂಳೂ ಸಹ ಬೆರೆತು ಹಾರದೇನು?
ಆಧ್ಯಾತ್ಮಿಕ ತೇಜ ಇಂಗಿ ಜಾತಿ ಮತದ ಮಬ್ಬು
ಕವಿಯುತ್ತಿದೆ ಮನುಜ ಅದನು ತಡೆಯಬಾರದೇನು?

– ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ.



- ❐ ಕವನವನ್ನು ಓದಿದಿರಲ್ಲವೇ? ಕವನದ ಆಶಯವನ್ನು ಬರೆಯಿರಿ.
- ❐ ‘ಪ್ರಕೃತಿಯಲ್ಲಿ ಭೇದವಿಲ್ಲ – ಭೇದ ಮನುಜನಲ್ಲಿದೆ’. ಈ ಹೇಳಿಕೆಯನ್ನು ಕವಿತೆಯ ಆಧಾರದಲ್ಲಿ ಚರ್ಚಿಸಿರಿ. ಚರ್ಚೆಯಲ್ಲಿ ಬಂದ ಅಭಿಪ್ರಾಯಗಳನ್ನು ಒಟ್ಟುಗೂಡಿಸಿ ಟಿಪ್ಪಣಿ ತಯಾರಿಸಿರಿ.
- ❐ ಕವಿತೆಯನ್ನು ಮುಂದುವರಿಸಿ ಬರೆಯಿರಿ.

ಧರೆಯ ಮನುಜರೆಲ್ಲ ಬನ್ನಿ
ಒಂದುಗೂಡಿ ಬಾಳುವ
ಜಾತಿಭೇದ ಇಲ್ಲವೆನ್ನಿ
ಸ್ನೇಹದಿಂದ ಬದುಕುವ
ಮೇಲು ಕೀಳು ನಮ್ಮೊಳಿಲ್ಲ

..........................................
..........................................
..........................................
..........................................

## ಕಂಬನಿ ಒರಸುವ ಕೈ

ತ್ಸುನಾಮಿ ಎನ್ನುವ ನಿಷ್ಕರುಣೆಯ ರಾಕ್ಷಸ ಅಲೆ ಕಡಲತೀರದ ಬೆಸ್ತರ ಜೀವನವನ್ನೇ ಅಲ್ಲೋಲಕಲ್ಲೋಲ ಮಾಡಿದೆ. ಇಂಥ ಸಮಯದಲ್ಲಿ ನಮ್ಮ ದೇಶದ ದಾನಿಗಳು ಹಿಂದೆ ಮುಂದೆ ನೋಡದೆ ತನು, ಮನ, ಧನಗಳಿಂದ ಸಂತ್ರಸ್ತರಿಗೆ ಸ್ಪಂದಿಸಿದ್ದಾರೆ. ಹೆಸರಾಂತ ಪ್ರದೇಶಗಳಾದ ನಾಗಪಟ್ಟಣ, ವೇಲಾಂಕಣಿ, ಕಡಲೂರು, ಕಾರೆಕಲ್‌ಗಳಲ್ಲಿ ಸಂತ್ರಸ್ತರಿಗೆ ಸಾಕುಬೇಕೆನ್ನುವಷ್ಟು ಸಹಾಯ ವಿವಿಧ ರೂಪದಲ್ಲಿ ಬಂದಿದೆ. ಸಾಮಾನ್ಯವಾಗಿ ಸೀರೆ, ಧೋತ್ರ, ಬೇಡ್‌ಶೀಟ್, ಟವೆಲ್, ಸೀಮೆಎಣ್ಣೆ, ಒಲೆ, ಪ್ಲಾಸ್ಟಿಕ್ ಸಾಮಾನು, ಸ್ಟೀಲ್ ಪಾತ್ರೆಗಳು, ಕುಡಿಯುವ ನೀರಿನ ಬಾಟಲಿ, ಚಾಪೆ ಇತ್ಯಾದಿಗಳು ಜನರಿಗೆ ಬಂದು ತಲುಪುತ್ತವೆ. ಕೇವಲ ಕೆಲವೇ ನಿಮಿಷಗಳ ಕಾಲ ತ್ಸುನಾಮಿ ಅಲೆ ಬಂದು ಬಡಿದರೂ ಜನರ ಜೀವನ ಮುಕ್ಕಾಗಿದೆ.



ನಮ್ಮ ತಂಡ ಇಂಥ ಪ್ರದೇಶಕ್ಕೆ ಭೇಟಿಕೊಟ್ಟಾಗ ಜನರಿಗೆ ಅವಶ್ಯವಾದ, ಆದರೆ ದಾನರೂಪದಲ್ಲಿ ಬರದೇ ಇರುವ ಅನೇಕ ವಸ್ತುಗಳು ಯಾವುವೆಂದು ಸೂಕ್ಷ್ಮವಾಗಿ ಪರಿಶೀಲಿಸಿದಾಗ ತಿಳಿಯಿತು. ಉದಾಹರಣೆಗೆ – ಮೊಂಬತ್ತಿ, ರೇಡಿಯೋ, ಟಾರ್ಚ್, ತಲೆಗೆ ಹಚ್ಚುವ ಎಣ್ಣೆ, ಅನಾಸಿನ್ ಮಾತ್ರೆಗಳು, ಬಾಚಣಿಗೆ, ಕಡ್ಡಿಪೆಟ್ಟಿಗೆ ಮುಂತಾದವುಗಳನ್ನು ಜನರು ದಾನ ಕೊಡುವಾಗ ಗಮನಿಸುವುದಿಲ್ಲ. ಅಲ್ಲದೆ ಅಳಿದುಳಿದ ಬೆಲೆಯುಳ್ಳ ಸಾಮಾನುಗಳನ್ನು ಜೋಪಾನ ಮಾಡಲು ಅವರ ಬಳಿ ಯಾವುದೇ ವಸ್ತುಗಳಿರಲಿಲ್ಲ. ಇಂಥ ಸಮಯದಲ್ಲಿ ಕಳ್ಳಕಾಕರ ಭಯವಿರುವುದರಿಂದ ಆ ವಸ್ತುಗಳು ಮಾಯವಾಗಬಹುದು. ಆದ್ದರಿಂದ ಅವರಿಗೊಂದು ಉತ್ತಮವಾದ ಪೆಟ್ಟಿಗೆಯನ್ನು ಬೀಗದ ಸಮೇತ ಕೊಟ್ಟರೆ ಅವರಿಗೆ ಮಾನಸಿಕವಾಗಿ ಭದ್ರತೆಯ ಭಾವ ಬರಬಹುದು ಎಂದು ನನಗನ್ನಿಸಿತು. ಅದರೊಟ್ಟಿಗೆ ಇನ್ನೂ ಹಲವು ದಿನಸಿ, ಸೋಪು, ಟೂತ್‌ಪೇಸ್ಟ್ ಅಥವಾ ಟೂತ್‌ಪೌಡರ್, ಔಷಧಿ ಮುಂತಾದ ಸಾಮಾನುಗಳನ್ನು ಕೊಡಬೇಕೆಂದು ನಿರ್ಧರಿಸಿದೆ.

ಈ ವಿಚಾರ ತಿಳಿದೊಡನೆಯೇ ಅನೇಕ ದಾನಿಗಳು ತಾವಾಗಿಯೇ ಮುಂದೆ ಬಂದರು. ಅಂಗಡಿಗಳಲ್ಲಿ ಸಾಮಾನುಕೊಳ್ಳುವಾಗ ಅಂಗಡಿಯ ಮಾಲಿಕರು ದೊಡ್ಡ ರಿಯಾಯಿತಿಯೊಡನೆ, ಸಾಮಾನನ್ನು ನಮ್ಮ ಜಾಗಕ್ಕೆ ಅವರೇ ತಂದುಕೊಡುವ ಸಭ್ಯತೆಯನ್ನು ತೋರಿಸಿದರು. ವಿ.ಆರ್.ಎಲ್. ಕಂಪೆನಿಯೂ ಶೇಕಡ ಐವತ್ತೈದರಷ್ಟು ರಿಯಾಯಿತಿ ಕೊಟ್ಟು ಸಾಮಾನನ್ನು ನಮ್ಮ ಜಾಗದಿಂದ ನಾವು ಹೇಳಿದ ಜಾಗಕ್ಕೆ ಕೊಂಡೊಯ್ಯುವ ಔದಾರ್ಯವನ್ನು ತೋರಿಸಿತು. ಎರಡು ಟ್ಯಾಕ್ಸಿ ಕಂಪನಿಯವರು ಹವಾನಿಯಂತ್ರಿತ ಕ್ವಾಲಿಸ್ ಗಾಡಿಯನ್ನು ಬಿಟ್ಟಿಯಾಗಿ ನಮಗಾಗಿಯೇ ಬಿಟ್ಟುಕೊಟ್ಟರು.

ನನ್ನ ವಿದ್ಯಾರ್ಥಿ ಜಾರ್ಜ್ ಜೋಸೆಫ್ ಎಂದೋ ಹೇಳಿಕೊಟ್ಟ ಋಣದ ಪಾಠವನ್ನು ನೆನಪಿಸಿಕೊಂಡು ಬೆಂಗಳೂರಿನಲ್ಲಿರುವ ಅವರ ಹೊಸ ಕಟ್ಟಡವನ್ನು ಈ ಸಾಮಾನುಗಳನ್ನು ಇಳಿಸಿಕೊಳ್ಳಲು, ಅವುಗಳನ್ನು ಪ್ಯಾಕ್ ಮಾಡಲು ಅನುವುಮಾಡಿಕೊಟ್ಟರು. ಅಲ್ಲದೇ ಪ್ಯಾಕ್ ಮಾಡುವಾಗ ಮಧ್ಯೆ ಮಧ್ಯೆ ತಮ್ಮ ಸ್ವಂತ ಖರ್ಚಿನಿಂದ ಕಾಫಿ ತಿಂಡಿ ಸರಬರಾಜು ಮಾಡಿದರು.

ನಮ್ಮ ಈ ಹೊಸ ಜಾಗದಲ್ಲಿ ಒಂದು ಸಮಸ್ಯೆ ಇದ್ದಿತ್ತು. ಆದರೆದುರಿನ ರಸ್ತೆ ಚಿಕ್ಕದು, ಚಿಕ್ಕ ಗಾಡಿಗಳಾದರೆ ಸಲೀಸಾಗಿ ಬರಬಹುದಿತ್ತು. ಟ್ರಕ್ ಬರಲು ಆಗುತ್ತಿರಲಿಲ್ಲ. ಆದರೆ ಈ ಜಾಗಕ್ಕೆ ಹೊಂದಿಕೊಂಡು ವಿಶಾಲವಾದ ಖಾಲಿ ಜಾಗವೊಂದಿತ್ತು. ಅಲ್ಲದೇ ಅದು ಕಾರ್ನರ್ ಸೈಟ್ ಆಗಿದ್ದಿತು. ನಾವು ತ್ಸುನಾಮಿ 'ಸರ್ವೈವಲ್ ಕಿಟ್'ನಲ್ಲಿ ಸಾಮಾನು ತುಂಬಿಸಿ ತುಂಬಿಸಿ ಪೇರಿಸುತ್ತಾ ಹೋದಂತೆ ಅದು ಒಂದು ಸಣ್ಣ ಗುಡ್ಡದಂತೆ ಕಾಣುತ್ತಿತ್ತು. ಈಗ ನಿಜವಾದ ಸಮಸ್ಯೆಯೆಂದರೆ ಈ 'ಸರ್ವೈವಲ್ ಕಿಟ್' ಅನ್ನು ವಿ.ಆರ್.ಎಲ್. ಟ್ರಕ್ಕಿಗೆ ತುಂಬಿಸುವ ಬಗೆ ಹೇಗೆ? ಆಗ ಜಾರ್ಜ್ ನನಗೊಂದು ಸಲಹೆ ಕೊಟ್ಟರು.

"ಮ್ಯಾಡಂ, ಟ್ರಕ್ ಬಂದು ಹೋಗಲು ಬದಿಯ ಸೈಟ್ ಹೆಚ್ಚು ಅನುಕೂಲ. ಅದು ಮೂಲೆಯಲ್ಲಿದ್ದು ದೊಡ್ಡ ರಸ್ತೆಗೆ ಹೊಂದಿಕೊಂಡಿದೆ. ಅದರ ಒಡೆಯ ನನಗೆ ಪರಿಚಿತರು. ಅವರು ಈಗ ಈ ದೇಶದಲ್ಲಿ ಇಲ್ಲ. ಅವರ ಆರ್ಕಿಟೆಕ್ಟ್‌ಗೆ ಇಲ್ಲಿ ಕಟ್ಟಡ ಕಟ್ಟುವ ಕೆಲಸ ವಹಿಸಿದ್ದಾರೆ. ಅವರೂ ನನಗೆ ಪರಿಚಿತರೇ. ನಾನು ಅವರ ಆಫೀಸಿಗೆ ಫೋನ್ ಮಾಡಿ ಅನುಮತಿ ಕೇಳುತ್ತೇನೆ. ನೀವೇನೂ ಯೋಚನೆ ಮಾಡಬೇಡಿ. ಸಾಮಾನು ತುಂಬಿದ ಈ ಪೆಟ್ಟಿಗೆಗಳನ್ನು ಪಕ್ಕದ ಸೈಟಿನಲ್ಲಿಡಿ. ಅಲ್ಲಿ ಕಾವಲುಗಾರರೂ ಇದ್ದಾರೆ."

ಮರುದಿನ ಇಪ್ಪತ್ತೈದರ ಹರೆಯದ ಚುರುಕುಗಣ್ಣಿನ, ತೆಳ್ಳನೆಯ, ಸುಂದರವಾದ, ಜೀನ್ಸ್‌ಧಾರಿ ಹುಡುಗಿಯೊಬ್ಬಳು ನಾವು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಬಂದಳು. ಮುಖದಲ್ಲಿ ಅದಮ್ಯ ಉತ್ಸಾಹ. "ಮ್ಯಾಡಂ, ಜಾರ್ಜ್ ನನ್ನ ಬಳಿ ನಿಮ್ಮ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ನಾನು ಪಕ್ಕದ ಸೈಟಿನ ಉಸ್ತುವಾರಿ ನೋಡಿಕೊಳ್ಳುವ

ಆರ್ಕಿಟೆಕ್ಟಿನ ಸಹಾಯಕಿ. ನಮ್ಮದೇನೂ ಅಭ್ಯಂತರವಿಲ್ಲ. ನಮಗಂತೂ ತ್ಸುನಾಮಿಗೆ ಹೋಗಲು ಸಾಧ್ಯವಿಲ್ಲ. ನೀವು ಮಾಡುವ ಕೆಲಸಕ್ಕೆ ಸಹಾಯ ಮಾಡಿದರೆ ನಮಗೆ ತುಂಬಾ ಸಂತೋಷ. ಈ ಜಾಗದಲ್ಲಿ ಕೆಲಸ ಶುರುಮಾಡುವುದಕ್ಕೆ ಇನ್ನೂ ಒಂದು ವಾರವಿದೆ ಅಲ್ಲಿಯವರೆಗೂ ಇದು ಬೀಡುನೆಲ."

"ನಿಜವಾಗಿ ನಿಮಗೆ ನಮ್ಮಿಂದ ತೊಂದರೆ ಇಲ್ಲವೆ?" ಎಂದು ಮತ್ತೆ ಮತ್ತೆ ಕೇಳಿದೆ. "ಖಂಡಿತವಾಗಿಯೂ ಇಲ್ಲ ಮ್ಯಾಡಂ. ಈಗ ನನ್ನ ಬಾಸ್ ಊರಲಿಲ್ಲ, ಅವರು ವಾಪಸ್ಸು ಬಂದರೂ ತ್ಸುನಾಮಿ ಕೆಲಸಕ್ಕೆ ಇಲ್ಲವೆನ್ನುವುದಿಲ್ಲ ಎನ್ನುವ ಭರವಸೆ ನನಗಿದೆ" ಹುಡುಗಿ ಕುದುರೆಯಂತೆ ಕುಣಿಯುತ್ತಾ ಹೋಗಿಬಿಟ್ಟಳು.

ಆ ದಿನ ಸಂಜೆಗೆ ನಮ್ಮ ಕೆಲಸ ಮುಗಿಯಿತು. ನಮ್ಮ ಗುಂಪಿನ ಜನರಿಂದ ಈ 'ಸರ್ವೈವಲ್ ಕಿಟ್' ಎಲ್ಲವೂ ಪಕ್ಕದ ಸೈಟಿಗೆ ರವಾನೆಯಾದವು. ನಮಗೆಲ್ಲಾ ಹೊಟ್ಟೆತುಂಬಿದಷ್ಟು ತೃಪ್ತಿ. ಮರುದಿನ ಬೆಳಿಗ್ಗೆ ಟ್ರಕ್ ಬಂದು ಈ 'ಸರ್ವೈವಲ್ ಕಿಟ್'ಗಳನ್ನು ಕೊಂಡೊಯ್ಯುವ ತನಕ ಬೇರೆ ಕೆಲಸವಿಲ್ಲ. ಇನ್ನೇನು ನಾವು ಮನೆಗೆ ಹೊರಡಬೇಕು, ಅಷ್ಟರಲ್ಲಿ ಮರ್ಸಿಡಿಸ್ ಬೆಂಝ್ ಕಾರೊಂದು ಬಂದು ನಿಂತಿತು. ಅದರಿಂದ ಅತ್ಯಾಧುನಿಕ ಬಟ್ಟೆ ಧರಿಸಿದ ಕೈಯಲ್ಲಿ ಸೆಲ್‌ಫೋನ್ ಹಿಡಿದ ಮಧ್ಯವಯಸ್ಸಿನ ಅಪರಿಚಿತ ನಡೆದು ಬಂದರು. ಬಂದವರೆ ಕೋಪದಿಂದ ನನ್ನನ್ನು ನೋಡಿ "ಯಾರ ಅನುಮತಿ ಪಡೆದು ನೀವು ಈ ಟ್ರಂಕುಗಳನ್ನು ನಮ್ಮ ಸ್ಥಳದಲ್ಲಿ ಇರಿಸಿದ್ದೀರಿ?" ಎಂದರು.

ಆತನ ಗತ್ತು, ಅಧಿಕಾರ ನೋಡಿ ಪೋಲಿಸು ತಪ್ಪು ಮಾಡಿದ ಕಳ್ಳನನ್ನು ಸಂಶಯಿಸುವಂತೆ ನನಗನ್ನಿಸಿತು. ಕ್ಷಣಾರ್ಧದಲ್ಲಿ ಈತನೇ ಆ ಆರ್ಕಿಟೆಕ್ಟ್ ಎಂದು ಆತನ ಗತ್ತಿನಿಂದ ಗ್ರಹಿಸಿದೆ. ಆದರೂ ವಿಚಲಿತಳಾಗದೆ ವಿನಯದಿಂದ "ಜಾರ್ಜ್ ಜೋಸೆಫ್‌ರು ನಿಮ್ಮ ಆಫೀಸಿನಿಂದ ಅನುಮತಿ ತೆಗೆದುಕೊಂಡಿದ್ದೇನೆ ಎಂದಿದ್ದಾರೆ. ಅಲ್ಲದೆ ನಿನ್ನೆ ನಿಮ್ಮ ಸಹಾಯಕಿ ಬಂದು ಅದನ್ನು ಅನುಮೋದಿಸಿದ್ದಾರೆ. ಆದ್ದರಿಂದ ನಿಮಗೆ ಈ ವಿಷಯ ತಿಳಿದಿದೆ ಎಂದು ತಿಳಿದಿದ್ದೆ" ಎಂದು ಹೇಳಿದೆ.

"ಇಲ್ಲ, ಖಂಡಿತವಾಗಿ ನನಗೆ ಈ ವಿಷಯ ತಿಳಿದಿಲ್ಲ. ನಾನು ಪ್ರವಾಸದಲ್ಲಿದ್ದೆ. ನೀವು ತ್ಸುನಾಮಿ ಕೆಲಸ ಮಾಡುತ್ತಿರಬಹುದು, ಆದರೆ ನನ್ನ ಅನುಮತಿಯಿಲ್ಲದೆ ಬರೀ ನನ್ನ ಆಫೀಸಿನ ಅನುಮತಿಯೊಂದಿಗೆ ಈ ಕೆಲಸ ಮಾಡಲಾರಿರಿ. ನೀವೊಬ್ಬ ಜವಾಬ್ದಾರಿ ಇರುವ ಹೆಂಗಸು. ಈ ರೀತಿಯ ಬೇಜವಾಬ್ದಾರಿ ಕೆಲಸ ಮಾಡಬಾರದು. ನಾನು ನನ್ನ ಕ್ಲಯಂಟಿಗೆ ಏನೆಂದು ಉತ್ತರ ಕೊಡಲಿ? ಈ ಜಾಗದಲ್ಲಿ ಕೆಲಸ ಮಾಡುವ ಜನರು ಈಗಾಗಲೇ ಬರುತ್ತಾರೆ. ಈ ಜಾಗವನ್ನು ರಕ್ಷಿಸುವುದು ನನ್ನ ಕರ್ತವ್ಯವಾಗಿದೆ."

ಆತನ ಮಾತಿನಿಂದ ಇನ್ನೂ ಅಚ್ಚರಿಯಾಯಿತು. ನಾನು ಮತ್ತೆ "ನನ್ನದು ತಪ್ಪಾಯಿತು, ಬಹುಶಃ ನಿಮಗೆ ಸುದ್ದಿ ಮುಟ್ಟಿರಲಿಲ್ಲವೋ ಏನೋ, ಇರಲಿ ಇದು ಬಡಜನರಿಗಾಗಿ ಮಾಡುವ ಕೆಲಸ. ದಯವಿಟ್ಟು ಇದೊಂದು ರಾತ್ರಿ ಈ ಟ್ರಂಕ್‌ಗಳನ್ನು ಇಟ್ಟುಕೊಳ್ಳಲು ಅವಕಾಶ ಕೊಡಿ" ಎಂದು ಅಂಗಲಾಚಿದೆ.

"ಅದು ಸಾಧ್ಯವೇ ಇಲ್ಲ. ನೀವು ಮುಂಚೆ ತಿಳಿಸಿದ್ದರೆ ನಾನು ಇದೇ ಸೈಟಿನಲ್ಲಿ ಬೇರೆ ಜಾಗವನ್ನು ಕೊಡುತ್ತಿದ್ದೆ. ನನ್ನ ಅನುಮತಿಯನ್ನು ನೀವು ಪಡೆದಿಲ್ಲ. ಈಗ ಕೂಡಲೇ ಇದೆಲ್ಲವನ್ನೂ ಈ ಜಾಗದಿಂದ ಖಾಲಿ ಮಾಡಿ, ಬೇಕಾದರೆ ರಸ್ತೆ ಬದಿಯಲ್ಲಿರಿಸಿರಿ. ನಾನೊಂದು ಕ್ಷಣವೂ ಇದು ಇಲ್ಲಿರಲು ಬಿಡುವುದಿಲ್ಲ" ಎಂದು ಅಂದದ್ದನ್ನೇ ಅನ್ನುವ ಚಂಡಿ ಹುಡುಗನಂತೆ ಹಠಹಿಡಿದರು.

ಈಗಾಗಲೇ ಆತನ ಮಾತಿನ ರೀತಿಯಿಂದ ಮನಸ್ಥಿತಿ ನನಗರ್ಥವಾಗಿತ್ತು. ಆತನಿಗೆ ಸ್ಥಳ ಕೊಡುವುದಕ್ಕಿಂತ ಹೆಚ್ಚಾಗಿ ತನ್ನ ಅಧಿಕಾರದ ಗರ್ವವನ್ನು ನನಗೆ ಮನದಟ್ಟು ಮಾಡಿಕೊಡುವುದೇ ಉದ್ದೇಶವಾಗಿತ್ತು. ಇಂಥವರಿಗೆ ತಿಳಿಹೇಳುವುದು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ.



ಕಳ್ಳು ಕುಡಿದವರನ್ನು ಮಾತನಾಡಿಸಬಹುದು. ಆದರೆ ಹಣದ ಗರ ಹೊಡೆದವರನ್ನು ಮಾತನಾಡಿಸಬಹುದೇ?

ಈ ವೇಳೆಗಾಗಲೇ ನನ್ನ ತರುಣ ಸಹೋದ್ಯೋಗಿಗಳು ಆವೇಶಗೊಂಡರು. ಕೋಪದಿಂದ ಕೆಂಪಾದರು, ವಾಗ್ವಾದಕ್ಕೆ ಇಳಿಯಲು ಸನ್ನದ್ಧರಾದರು. ನಾನು ಅವರನ್ನು ತಡೆಹಿಡಿದೆ. "ಕ್ಷಮಿಸಿ, ನಾವು ಈಗಲೇ ಈ ಜಾಗವನ್ನು ಬಿಟ್ಟು ಕೊಡುತ್ತೇವೆ. ನಿಮ್ಮ ಅಧಿಕಾರವನ್ನು ಅತಿಕ್ರಮಿಸಿದ್ದಕ್ಕಾಗಿ ನಾವು ಕೊಡುವ ತಪ್ಪು ದಂಡನೆ ಇದು. ನಮಗೆ ಶ್ರಮವಾದರೂ ಚಿಂತೆಯಿಲ್ಲ. ನಮ್ಮ ಸಾಮಾನುಗಳನ್ನು ರಸ್ತೆ ಬದಿಯಲ್ಲಿ ಟ್ರಕ್ ಬರುವವರೆಗೂ ಇರಿಸಿಕೊಳ್ಳುತ್ತೇವೆ."

ಈ ಮಾತಿನಿಂದ ನಮ್ಮ ಗುಂಪಿನ ತರುಣ ಹುಡುಗ ಕುಮಾರ ಆತಂಕಗೊಂಡು "ಮ್ಯಾಡಂ, ರಸ್ತೆ ಬದಿಗಿರಿಸಿದರೆ ಯಾರಾದರೂ ಕಳುವು ಮಾಡಬಹುದು, ಇಲ್ಲವೇ ರಸ್ತೆಯಲ್ಲಿ ಇಂಥದ್ದೇ ಜನರು ಮತ್ತೆ ತಕರಾರು ತೆಗೆಯಬಹುದು."

ನಾನು ನಗುತ್ತಾ ಹೇಳಿದೆ "ಕುಮಾರ, ನೀವೇನೂ ಯೋಚನೆ ಮಾಡಬೇಡಿ ಟ್ರಂಕ್ ಮೇಲೆ 'ತ್ಸುನಾಮಿ ಸಂತ್ರಸ್ತರಿಗಾಗಿ' ಎಂಬ ಬ್ಯಾನರನ್ನು ಹೊದಿಸೋಣ. ಸಾಮಾನ್ಯ ಜನರಾರೂ ಅದನ್ನು ಮುಟ್ಟುವ ಗೋಜಿಗಾಗಲೀ ತಕರಾರು ಮಾಡುವ ಗೋಜಿಗಾಗಲೀ ಹೋಗುವುದಿಲ್ಲ ಎನ್ನುವ ಭರವಸೆ ನನಗಿದೆ."

ಮರುದಿನ ಎಂದಿನಂತೆ ಹೇಳಿದ ಸಮಯಕ್ಕೆ ಟ್ರಕ್ ಬಂದು ನಮ್ಮ ಸಾಮಾನುಗಳನ್ನು ಕೊಂಡೊಯ್ದಿತು. ನನ್ನ ಜೊತೆಯಲ್ಲೇ ಕುಮಾರ ನನ್ನ ಆಫೀಸಿಗೆ ಬಂದರು. ಆತನ ಮುಖ ತೃಪ್ತಿಯ ಬದಲು ಇಳಿದುಹೋಗಿತ್ತು. ನನ್ನೆದುರಿಗೆ ಕುಳಿತು ಸೋತ ದನಿಯಲ್ಲಿ ಕೇಳಿದರು "ಮ್ಯಾಡಂ, ಈ ಸಂತ್ರಸ್ತರು ನಿಮ್ಮ ಸಂಬಂಧಿಕರಲ್ಲ, ಭಾಷೆಯವರಲ್ಲ, ನಿಮ್ಮ ಪ್ರದೇಶದವರೂ ಅಲ್ಲ, ನಿಮ್ಮ ಬಳಗದವರಂತೂ ಅಲ್ಲವೇ ಅಲ್ಲ. ನಿನ್ನೆ ನೋಡಿದಂಥ ಆರ್ಕಿಟೆಕ್ಟ್ ಜನರೊಂದಿಗೆ ಹೊಡೆದಾಡಿ ಬಡಿದಾಡಿ ಅವರಿಗೆ ಸಹಾಯ ಮಾಡುವುದರಿಂದ ನಿಮಗೇನು ಬರುತ್ತದೆ? ದೈಹಿಕ ಆಯಾಸದ ಜೊತೆಗೆ ಮಾನಸಿಕ ಹಿಂಸೆ ಬೇರೆ. ಆದರೂ ನೀವು ಯಾತಕ್ಕಾಗಿ ಕೆಲಸ ಮಾಡುತ್ತೀರೀ?"

ನಾನು ಉತ್ತರಿಸಬೇಕು ಎನ್ನುವಷ್ಟರಲ್ಲಿಯೇ ನನ್ನ ಕೋಣೆಯ ಬಾಗಿಲನ್ನು ಯಾರೊ ತಟ್ಟಿದಂತಾಯಿತು. ಒಳಗೆ ಬಂದವರು ಆರ್ಕಿಟೆಕ್ಟ್ ಸೈಟಿನ ಕಾವಲುಗಾರರಾಗಿದ್ದರು. ಬಹುಶಃ ಸೈಕಲ್ ತುಳಿದು ಬಂದಿದ್ದರಿಂದ ಆಯಾಸವಾಗಿತ್ತೋ ಏನೋ. ಮುಖದಲ್ಲಿ ದಣಿದ ಕಳೆ ಆದರೆ ಮಂದಹಾಸವಿದ್ದಿತ್ತು. ಅವರನ್ನು ನೋಡಿ ನಾನು 'ಮತ್ತೇನಪ್ಪಾ ಹೊಸ ತಕರಾರು?' ಎಂದು ವಿಚಲಿತಳಾದೆ.

"ಮ್ಯಾಡಂ, ನಿನ್ನೆ ನಮ್ಮ ಬಾಸ್ ಮಾಡಿದ ಕೆಲಸ ತಪ್ಪು. ಅವರನ್ನೆದುರಿಸುವ ಶಕ್ತಿ ನಮ್ಮಂಥವರಿಗಿಲ್ಲ. ಎದುರಿಸಿದರೆ ಕೆಲಸ ಕಳೆದುಕೊಂಡೇನು ಎನ್ನುವ ಭಯ ಬೇರೆ. ನಿನ್ನೆ ರಾತ್ರಿ ನಿಮ್ಮ ಅನುಮತಿ ಕೇಳದೆ ನನ್ನ ಡ್ಯೂಟಿ ಮುಗಿದ ನಂತರ ನಾನು ರಸ್ತೆ ಬದಿಯಲ್ಲಿದ್ದ ನಿಮ್ಮ ಟ್ರಂಕ್‌ಗಳನ್ನು ಕಾದೆ. ಈ ನನ್ನ ಒಂದು ದಿನದ ಸಂಬಳವನ್ನು ನಿಮಗೆ ಕೊಡುತ್ತಿದ್ದೇನೆ. ಬಡವನಾದ ನನ್ನಿಂದ ತ್ಸುನಾಮಿ ಸಂತ್ರಸ್ತರಿಗೆ ಏನು ಸಾಧ್ಯವೋ ಅಷ್ಟು ಮಾಡಿದ್ದೇನೆ. ನೀವು ಇಂಥ ಕೆಲಸವನ್ನು ಮುಂದುವರಿಸಿರಿ. ದೇವರು ನಿಮಗೆ ಹೆಚ್ಚು ಆರೋಗ್ಯ ಮತ್ತು ಶಕ್ತಿಯನ್ನು ಕೊಡಲಿ" ನನ್ನ ಉತ್ತರಕ್ಕಾಗಿ ಕಾಯದೆ ಕೊಳೆಯಾದ ಒಂದು ಕವರ್ ಅನ್ನು ಮುಂದಿರಿಸಿ ಹೊರಟುಹೋದರು. ನಾನು ಆ ಕವರ್ ತೆಗೆದೆ, ಅದರಲ್ಲಿ ನೂರಾಅರವತ್ತು ರೂಪಾಯಿಗಳಿದ್ದವು. ನನ್ನ ಕಣ್ಣುಗಳು ತುಂಬಿಬಂದವು. ಒದ್ದೆಯಾದ ಕಣ್ಣುಗಳನ್ನು ಒರಸಿಕೊಳ್ಳದೆ ನಾನು ಕುಮಾರನ ಕಡೆಗೆ ತಿರುಗಿ ಎಂದೆ,

"ಈ ಹಣ ನನಗೆ ಹದಿನಾರು ಲಕ್ಷಕ್ಕೆ ಸಮ. ನಿಮ್ಮ ಪ್ರಶ್ನೆಗೆ ಉತ್ತರ ಇಲ್ಲಿದೆ. ನಾನು ಇಂಥವರಿಗಾಗಿಯೇ ಕೆಲಸ ಮಾಡುತ್ತೇನೆ. ಇಂಥವರಿಗೆ ನಾನು ಜೀವನಪರ್ಯಂತ ಋಣಿಯಾಗಿದ್ದೇನೆ. ದೇವರು ನಮಗೆ ಕೈಗಳನ್ನು ಕೊಟ್ಟಿರುವುದು ಕೇವಲ ಚಿನ್ನದ, ರತ್ನದ ಬಳೆಗಳನ್ನು ಹಾಕಿಕೊಳ್ಳಲು ಅಲ್ಲ. ಅದರೊಂದಿಗೆ ಮತ್ತೊಬ್ಬರು ದುಃಖದಲ್ಲಿ ಇರುವಾಗ ಅವರ ಕಂಬನಿಗಳನ್ನು ಒರಸಲು, ದಾನಮಾಡಲು, ದುಡಿಯಲು ಕೊಟ್ಟಿರುತ್ತಾನೆ. ಕ್ರೌರ್ಯದ ಮರಳುಗಾಡಿನಲ್ಲಿ ಇವರಂಥ ಜನರು ಓಯಸಿಸ್‌ನಂತೆ ಕಾಣುತ್ತಾರೆ. ಅಂಥವರಿಗೆ ನಾನು ಕೃತಜ್ಞಳಾಗಿದ್ದೇನೆ."

‘ಎನಿತು ಜನರಿಗೆ

ಎನಿತು ಜನ್ಮಗಳಿಗೆ

ನಾನು ಎನಿತು ಋಣಿಯೋ

ಹಾಗೆ ನೋಡಿದರೆ ಈ ಜನ್ಮವೆಂಬುದು

ಒಂದು ಋಣದ ಗಣಿಯೋ?’

ಕುಮಾರ್ ಅವಕ್ಕಾಗಿ ನೋಡುತ್ತಿದ್ದರು.

**– ಡಾ। ಸುಧಾಮೂರ್ತಿ**

- ❒ “ಕಳ್ಳು ಕುಡಿದವರನ್ನು ಮಾತನಾಡಿಸಬಹುದು. ಆದರೆ ಹಣದ ಗರ ಹೊಡೆದವರನ್ನು ಮಾತನಾಡಿಸಬಹುದೇ?” – ಈ ಮಾತಿನ ಆಧಾರದಲ್ಲಿ ಆರ್ಕಿಟೆಕ್ಟ್‌ನ ಗುಣ ಸ್ವಭಾವವನ್ನು ವಿಶ್ಲೇಷಿಸಿ ಬರೆಯಿರಿ.
- ❒ ದಾನ, ಧರ್ಮ, ಸಂಪತ್ತಿನ ಕುರಿತು ಸರ್ವಜ್ಞನ ವಚನಗಳನ್ನು ಸಂಗ್ರಹಿಸಿ ಬರೆಯಿರಿ.
- ❒ ತ್ಸುನಾಮಿಯಂತೆ ನೆರೆ, ಭೂಕಂಪ, ಯುದ್ಧಗಳ ಸಂದರ್ಭಗಳಲ್ಲಿ ನಿರಾಶ್ರಿತರಾದವರ ಪರಿಸ್ಥಿತಿ ಹೇಗಿರಬಹುದೆಂದು ಊಹಿಸಿ ಅವರಿಗೆ ನೆರವು ನೀಡುವಂತೆ ಜನರಲ್ಲಿ ವಿನಂತಿಮಾಡುವ ಮನವಿ ಪತ್ರವೊಂದನ್ನು ತಯಾರಿಸಿರಿ.
- ❒ “ಈ ಹಣ ನನಗೆ ಹದಿನಾರು ಲಕ್ಷಕ್ಕೆ ಸಮ” ಎನ್ನುವ ಲೇಖಕಿಯ ಮಾತಿನ ಮೂಲಕ ಕಾವಲುಗಾರನ ಹಣವು ಅಲ್ಪವಾದರೂ ಕಷ್ಟಗಳಿಗೆ ಸ್ಪಂದಿಸುವ ಅವನ ಮನದ ಹಿರಿಮೆ ನಮಗೆ ಗೋಚರವಾಗುತ್ತದೆ. ಇದರ ಆಧಾರದಲ್ಲಿ ಕಷ್ಟಪಡುತ್ತಿರುವವರಿಗೆ, ಜನರು ಹೇಗೆಲ್ಲ ಸ್ಪಂದಿಸುತ್ತಾರೆಂದು ವಿಶ್ಲೇಷಿಸಿ ಒಂದು ಟಿಪ್ಪಣಿ ಬರೆಯಿರಿ.
- ❒ ಕೆಳಗಿನ ವಾಕ್ಯಗಳನ್ನು ಒಂದುಗೂಡಿಸಿ ಬರೆಯಿರಿ.

  ಉದಾ :

  - ಅಣ್ಣ ತಮ್ಮಂದಿರು ಉದ್ಯೋಗಕ್ಕಾಗಿ ಹಲವು ಕಡೆ ಅಲೆದಾಡಿದರು. ಅವರಿಗೆ ಉದ್ಯೋಗ ಸಿಗಲಿಲ್ಲ.
    ಅಣ್ಣ ತಮ್ಮಂದಿರು ಉದ್ಯೋಗಕ್ಕಾಗಿ ಹಲವು ಕಡೆ ಅಲೆದಾಡಿದರೂ ಉದ್ಯೋಗ ಸಿಗಲಿಲ್ಲ.
  - ಜೋಸೆಫ್ ಒಬ್ಬ ಕೃಷಿಕ. ಅವನು ಒಬ್ಬ ವಿದ್ಯಾವಂತ.

    ..........................................................................................................
  - ಅವನಿಗೆ ಒಂದು ಎಕರೆ ಗದ್ದೆ ಇದೆ. ಎರಡು ಎಕರೆ ರಬ್ಬರ್ ತೋಟವಿದೆ.

    ..........................................................................................................
  - ಗದ್ದೆಯಲ್ಲಿ ಭತ್ತ, ಹೆಸರು ಮತ್ತು ಉದ್ದು ಬೆಳೆಸುತ್ತಾನೆ. ಇದರಿಂದ ಅವನಿಗೆ ಆಹಾರದ ಸಮಸ್ಯೆ ಇಲ್ಲ.

    ..........................................................................................................
  - ರಬ್ಬರ್ ಹಾಳೆಗಳನ್ನು ಮಾರಿ ಹಣ ಸಂಪಾದಿಸುತ್ತಾನೆ. ಈ ಹಣದಿಂದ ಇತರ ಅಗತ್ಯ ವಸ್ತುಗಳನ್ನು ಖರೀದಿಸುತ್ತಾನೆ.

    ..........................................................................................................

❖❖❖